ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಅಕ್ಟೋಬರ್ 2021 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 1
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | October 2021 | Monthly

# ದೀಪಾವಳಿ
## ಶುಭಾಶಯಗಳು



INDIA'S JOURNEY OF
100 CRORE
VACCINATIONS

ಭಾರತವು ತನ್ನ ಅರ್ಹ ನಾಗರಿಕರಿಗೆ
## 100 ಕೋಟಿ ಡೋಸ್
ಕೋವಿಡ್ ಲಸಿಕೆ ನೀಡಿ ದಾಖಲೆ ಬರೆದಿದೆ.

A Journal of Karnataka Rajya Madhyamika Shikshaka Sangha (R.)

# ಸ್ವಾತಂತ್ರ್ಯೋತ್ಸವದ ಅಮೃತೋತ್ಸವ

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಸಂದಿರುವ ಈ ಸಂದರ್ಭ ದೇಶಾದ್ಯಂತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ನಮಗೆಲ್ಲರಿಗೂ ತಿಳಿದಿರುವ ವಿಷಯವೇ. ನಾವು ಪರತಂತ್ರರಾಗಲು ಕಾರಣವೇನು? ಪರತಂತ್ರದಲ್ಲಿ ಅನುಭವಿಸಿದ ನೋವುಗಳೇನು? ಸ್ವಾತಂತ್ರ್ಯ ಪಡೆಯಲು ನಮ್ಮವರು ತೆತ್ತ ಬೆಲೆಯೇನು? ಎಂಬುದೆಲ್ಲವನ್ನು ಸ್ಮರಿಸಿಕೊಳ್ಳಲು ಹಾಗೂ ನಮ್ಮ ಮುಂದಿನ ಪೀಳಿಗೆಗೆ ತಿಳಿಸಲು ಸುವರ್ಣಾವಕಾಶವೆಂದರೆ ತಪ್ಪಾಗಲಾರದು. ಭಾರತೀಯರಾದ ನಾವೆಲ್ಲರೂ ಈ ಸುಸಂದರ್ಭವನ್ನು ಉಪಯೋಗಿಸಿಕೊಂಡು ಅನೇಕ ಉತ್ತಮ ಕಾರ್ಯಗಳನ್ನು ಮಾಡುವುದರ ಮೂಲಕ ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಮಹನೀಯರ ಋಣ ತೀರಿಸುವ ಪ್ರಯತ್ನ ಮಾಡಬೇಕು.

ನಾವೆಲ್ಲಾ ಶಾಲೆಗಳಲ್ಲಿ ಬೋಧನೆ ಮಾಡುವ ಶಿಕ್ಷಕರು, ನಾವು ಬೋಧನೆಯಲ್ಲಿ ಅನುಕೂಲವಾಗುವ ಸಮಯವನ್ನು ನೋಡಿಕೊಂಡು ಭಾರತಮಾತೆಯನ್ನು ವಿದೇಶಿಯರಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದ ಹೋರಾಟಗಾರರನ್ನು ಪರಿಚಯಿಸುವ ಕಾರ್ಯವನ್ನು ಮಾಡಬೇಕು. ಚರ್ಚಾಸ್ಪರ್ಧೆಗಳು, ರಸಪ್ರಶ್ನಾಕಾರ್ಯಕ್ರಮ, ಭಾಷಣ, ವೇಷಭೂಷಣ ಸ್ಪರ್ಧೆಗಳನ್ನು ನಡೆಸುವ ಮೂಲಕವೂ ಈ ಕಾರ್ಯವನ್ನು ಮಾಡಬಹುದು. ಸಾಮಾಜಿಕ ಜಾಲತಾಣಗಳ ಉಪಯೋಗವನ್ನು ಸಹ ಈ ಕಾರ್ಯಕ್ಕೆ ನಾವೆಲ್ಲರೂ ಮಾಡಬಹುದಾಗಿದೆ. ನಮಗೆ ಗೊತ್ತಿರುವ, ನಮ್ಮ ಊರಿನಲ್ಲಿ ವಾಸಿಸುತ್ತಿರುವ ಅಥವಾ ನಮ್ಮೂರಿನಲ್ಲಿದ್ದು ಮರಣ ಹೊಂದಿರುವ, ಹೆಚ್ಚು ಪ್ರಸಿದ್ಧಿಯನ್ನು ಪಡೆಯದಿರುವ ಸ್ವಾತಂತ್ರ್ಯ ಹೋರಾಟಗಾರರ ಸಂದರ್ಶನ ಮಾಡಿ, ವಾಟ್ಸ ಆಫ್, ಫೇಸ್‌ಬುಕ್‌ಗಳಲ್ಲಿ ಪ್ರಕಟಿಸಬಹುದಾಗಿದೆ. ಇದನ್ನು ನಮ್ಮ ಶಿಕ್ಷಕ ಸಮಾಚಾರಕ್ಕೂ ಸಹ ನೀವು ಕಳುಹಿಸಬಹುದಾಗಿದೆ.

ಸ್ವಾತಂತ್ರ್ಯದ ಅಮೃತೋತ್ಸವದ ಈ ವರ್ಷದ ಸಂದರ್ಭವನ್ನು ಪ್ರತಿ ಭಾರತೀಯರು ವಿಶೇಷವಾಗಿ ಆಚರಿಸಬೇಕೆಂಬುದು ನಮ್ಮೆಲ್ಲರ ಆಶಯ. ನಾವು ಈಗಾಗಲೇ ಅದಕ್ಕಾಗಿ ಅನೇಕ ತಯಾರಿಗಳನ್ನು ಮಾಡಿಕೊಂಡು ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದೇವೆ. ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ನಮ್ಮ ಸಂಘಟನೆಯಿಂದ ಕೈಗೊಂಡಿರುವ ಒಂದು ಕಾರ್ಯಕ್ರಮವೆಂದರೆ "ನನ್ನ ಶಾಲೆ, ನನ್ನ ತೀರ್ಥಕ್ಷೇತ್ರ".

ಈ ಕಾರ್ಯಕ್ರಮವನ್ನು ನಿಮ್ಮ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹೋರಾಟಗಾರರ ಜನ್ಮಸ್ಥಳದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದರೊಂದಿಗೆ ಪ್ರಾರಂಭಿಸಬೇಕು. ಆ ಶಾಲೆಯ ಸದ್ಯದ ಪರಿಸ್ಥಿತಿಯ ಅವಲೋಕನ ಮಾಡಬೇಕು. ಆ ಶಾಲೆಯನ್ನು ಪುನರ್‌ನಿರ್ಮಾಣ ಮಾಡಲು ಬೇಕಾದ ಅವಶ್ಯಕತೆಗಳನ್ನು ಪಟ್ಟಿ ಮಾಡಬೇಕು. ನಂತರ ಸ್ಥಳೀಯ ಹಿರಿಯರು, ಆ ಶಾಲೆಯ ಹಳೆಯ ವಿದ್ಯಾರ್ಥಿಗಳು, ಆ ಜಿಲ್ಲೆಯಲ್ಲಿರುವ ನಮ್ಮ ಕಾರ್ಯಕರ್ತರನ್ನು ಮಾತನಾಡಿಸಿ, ಅವಶ್ಯಕವಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ನಂತರ ಅದೇ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಭೆ ನಡೆಸಿ, ಪೇಂಟಿಂಗ್ ಮಾಡಲು ಅವಶ್ಯಕವಿರುವ ಶಿಕ್ಷಕರು, ಗಿಡಗಳನ್ನು ನೆಡಲು ಗಿಡಗಳು, ಮೈದಾನವನ್ನು ಸಮತಟ್ಟು ಮಾಡಲು ಅವಶ್ಯಕವಾಗಿರುವ ಜೆ.ಸಿ.ಬಿ, ಗೋಡೆಗಳನ್ನು ಸುಂದರವಾಗಿಸಲು ಬೇಕಾಗಿರುವ ಸುಣ್ಣಬಣ್ಣದ ವ್ಯವಸ್ಥೆ ಮಾಡಿಕೊಳ್ಳುವುದು ಅತ್ಯವಶ್ಯಕ. ಹದಿನೈದು ದಿನಗಳ ಸಮಯ ತೆಗೆದುಕೊಂಡು ಈ ಎಲ್ಲಾ ಕಾರ್ಯಗಳನ್ನು ಪೂರೈಸಿ ಕೊನೆಯ ದಿನದಂದು ಇಲಾಖೆಯ ಅಧಿಕಾರಿಗಳನ್ನು, ಊರಿನ ಹಿರಿಯರನ್ನು, ಈ ಕಾರ್ಯ ಕೈಗೂಡಲು ಕೈಜೋಡಿಸಿದ ಎಲ್ಲರನ್ನು ಕರೆದು ಸರಳ ಸಮಾರಂಭ ಮಾಡಿ, ವರದಿಯು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವಂತೆ ಮಾಡಬಹುದು.

ಶಿಕ್ಷಕ ಸಮಾಚಾರದ ತಂಡವು ಮತ್ತೊಂದು ಆಲೋಚನೆಯನ್ನು ಮಾಡಿ, ಶಿಕ್ಷಕ ಸಮಾಚಾರದಲ್ಲಿ ಭಾರತಮಾತೆಯು ಸ್ವತಂತ್ರವಾಗುವಲ್ಲಿ ಶ್ರಮಿಸಿದ ಅನೇಕ ಹೋರಾಟಗಾರರನ್ನು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಹೋರಾಟಗಳ ಕುರಿತು ಬೆಳಕು ಚೆಲ್ಲುವ ಲೇಖನಗಳನ್ನು ಪ್ರಕಾಶಿಸಬೇಕೆಂದು ತೀರ್ಮಾನಿಸಿರುವುದಲ್ಲದೇ, ಈ ತಿಂಗಳ ಸಂಚಿಕೆಯಿಂದಲೇ ಆ ಕಾರ್ಯ ಆರಂಭವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳ ಲೇಖಕರು ಈ ಕಾರ್ಯದಲ್ಲಿ ಲೇಖನಗಳನ್ನು ಬರೆಯುವುದರೊಂದಿಗೆ ತಮ್ಮ ಸಹಯೋಗ ನೀಡಬೇಕೆಂದು ಶಿಕ್ಷಕ ಸಮಾಚಾರದ ತಂಡ ಮನವಿ ಮಾಡಿದೆ. ತಾವೆಲ್ಲರೂ ನಿಮ್ಮ ಲೇಖನಗಳನ್ನು ಪ್ರತಿ ತಿಂಗಳ 05 ನೇ ತಾರೀಖಿನೊಳಗೆ ಕಳುಹಿಸುವುದು.

– – – – –

**ಅಭಿನಂದನೆ**

ದಿನಾಂಕ 17,18/10/21 ರಂದು ದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಕಾಲೇಜಿನಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಹಾಗೂ ಸಾಧಾರಣ ಸಭೆ ನಡೆಯಿತು. ಮೂರು ವರ್ಷಗಳಿಗೊಮ್ಮೆ ನಡೆಯುವ ಸಂಘದ ಚುನಾವಣೆಯಲ್ಲಿ ಕರ್ನಾಟಕದ ಮೈಸೂರಿನ ಶ್ರೀ ಶಿವಾನಂದ ಸಿಂಧನಕೇರಾರವರು ಪ್ರಧಾನ ಕಾರ್ಯದರ್ಶಿಗಳಾಗಿ ಮತ್ತು ಮಹಿಳಾ ವಿಭಾಗದ ಸಹಕಾರ್ಯದರ್ಶಿಯಾಗಿದ್ದ ಕನಕಪುರದ ಶ್ರೀಮತಿ ಮಮತಾ ಡಿ.ಕೆರವರು ಮಹಿಳಾ ವಿಭಾಗದ ಕಾರ್ಯದರ್ಶಿಯಾಗಿ ಆಯ್ಕೆ ಆಗಿರುವುದಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಶಿಕ್ಷಕ ಸಮಾಚಾರದ ಸಂಪಾದಕೀಯ ತಂಡವು ಅಭಿನಂದಿಸುತ್ತದೆ.

ಸಂಪಾದಕ

## ಪರಿವಿಡಿ


- ರಾಷ್ಟ್ರೀಯ ಶಿಕ್ಷಣ ನೀತಿ– ಒಂದು ಪರಿಚಯ 3
- ಭಾರತ ಭಕ್ತ ಸತ್ಯಾನಂದ ಸ್ಟೋಕ್ 4
- ಸ್ವಾತಂತ್ರ್ಯ ಹೋರಾಟ – ಹಿನ್ನೋಟ ಮುನ್ನೋಟ 5
- ಸ್ವಾಮಿ ಶ್ರದ್ಧಾನಂದರು 6
- ಶೈಕ್ಷಣಿಕ ಪರಿವಾರದ ಪರಿವರ್ತನೆಗೆ ನಾವು ಶ್ರಮಿಸಬೇಕು : ಮಹೇಂದ್ರ ಕಪೂರ್ 7
- ವರದಿಗಳು 8
- ವಿದ್ಯಾರ್ಥಿ ಮಿತ್ರ 10
- ಚಿತ್ರಸುದ್ದಿ 11

# ರಾಷ್ಟ್ರೀಯ ಶಿಕ್ಷಣ ನೀತಿ– ಒಂದು ಪರಿಚಯ

**ನಾವು ಮಾನವಿತೆ ಮತ್ತು ಸಮಾನತೆಯ ಮೌಲ್ಯಗಳ ಮೇಲೆ ನಿರ್ಮಿತವಾದ ಆಧುನಿಕ ಪ್ರಜಾಪ್ರಭುತ್ವದೊಂದಿಗಿದ್ದೇವೆ. ನಾವು ನಿರ್ಮಿಸಲು ಬಯಸುವ ಸಮಾಜದ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣವನ್ನು ನೀಡಬೇಕು.**

**– ಡಾ. ಸರ್ವಪಲ್ಲಿ ರಾಧಾಕೃಷ್ಣನ್**

**ಶ್ರೀಯುತ ಮೇಟಿ**
**ಶಿಕ್ಷಕರು ಮತ್ತು ಎಬಿಆರ್‌ಎಸ್‌ಎಮ್‌ನ ಅಖಿಲ ಭಾರತೀಯ ಪ್ರಬಂಧ ಸ್ಪರ್ಧೆಯ ಪ್ರಥಮ ಬಹುಮಾನ ಪಡೆದವರು**

ಜಗತ್ತು ತ್ವರಿತ ಬದಲಾವಣೆಗಳಿಗೆ ಒಳಗಾಗುತ್ತಿದೆ. ಸಾಮಾಜಿಕ, ಆರ್ಥಿಕ ಮತ್ತು ತಂತ್ರಜ್ಞಾನದ ಆವಿಷ್ಕಾರಗಳಿಗೆ ಪ್ರತಿಕ್ರಿಯೆಯಾಗಿ ಶಿಕ್ಷಣ ವ್ಯವಸ್ಥೆಯು ಶರವೇಗದಲ್ಲಿ ವಿಕಸನವನ್ನು ಹೊಂದುತ್ತಿದ್ದು, ಬೃಹತ್ ದತ್ತಾಂಶ, ಯಂತ್ರ ಕಲಿಕೆ ಮತ್ತು ಕೃತಕ ಬುದ್ಧಿಮತ್ತೆಯಂತಹ ವಿವಿಧ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಗಳು ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಮಾನವಿಕ ಸೇರಿದಂತೆ ಬಹುಶಿಸ್ತೀಯ ಸಾಮರ್ಥ್ಯಗಳನ್ನು ಹೊಂದಿರುವ ಕಾರ್ಯಪಡೆಯನ್ನು ನಿರೀಕ್ಷಿಸುತ್ತಿವೆ. ಜೊತೆಗೆ, ಸಾರ್ವತ್ರಿಕವಾಗಿ ಅನ್ವಯಿಸಬಹುದಾದ, ಯೋಚಿಸುವ, ಕಲಿಯುವ, ಕಾರ್ಯನಿರ್ವಹಿಸುವ ಮತ್ತು ಇನ್ನಿತರೆ 21ನೇ ಶತಮಾನದ ಕೌಶಲ್ಯಗಳನ್ನು ಹೊಂದಿರುವುದೂ ಸಹ ಅತ್ಯಗತ್ಯವಾಗಿದೆ. ವಿಶ್ವದ ಅತಿದೊಡ್ಡ ಶೈಕ್ಷಣಿಕ ಜಾಲವ್ಯವಸ್ಥೆ ಮತ್ತು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯನ್ನು ಹೊಂದಿರುವ ಭಾರತವನ್ನು ಜಾಗತಿಕ ಮಟ್ಟದಲ್ಲಿ ಜ್ಞಾನದ ಪರಮೋಚ್ಚ ರಾಷ್ಟ್ರವನ್ನಾಗಿ ಮಾಡುವ ಗುರಿಯನ್ನು ಹೊಂದಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ (NPE- National Policy on Education) ಎಂಬುದು ಭಾರತದ ಜನರಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಭಾರತ ಸರ್ಕಾರವು ರೂಪಿಸಿದ ಒಂದು ನೀತಿ. ಈ ನೀತಿಯು ಗ್ರಾಮೀಣ ಮತ್ತು ನಗರ ಭಾರತದ ಕಾಲೇಜು ಮತ್ತು ಪ್ರಾಥಮಿಕ ಶಿಕ್ಷಣವನ್ನು ಒಳಗೊಂಡಿದೆ. 1968 ರಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಂದ ಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NPE) ಘೋಷಿಸಲ್ಪಟ್ಟಿತು.

1986 ರಲ್ಲಿ ಪ್ರಧಾನಿ ರಾಜೀವ್ ಗಾಂಧಿ ಅವರಿಂದ ಎರಡನೇ ಬಾರಿಗೆ ಘೋಷಿಸಲ್ಪಟ್ಟಿತು. 2017 ರಲ್ಲಿ ಭಾರತ ಸರ್ಕಾರವು ಕೆ. ಕಸ್ತೂರಿರಂಗನ್ ಅವರ ನೇತೃತ್ವದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣಕ್ಕಾಗಿ ಕರಡು ಸಿದ್ಧತೆಗಾಗಿ ಹೊಸ ಸಮಿತಿಯನ್ನು ನೇಮಿಸಿತ್ತು.

2019 ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಹೊಸ ಶಿಕ್ಷಣ ನೀತಿ 2019 ಕರಡನ್ನು ಬಿಡುಗಡೆ ಮಾಡಿತು. ಅದರ ನಂತರ ಹಲವಾರು ಸಾರ್ವಜನಿಕ ಸಮಾಲೋಚನೆಗಳು ನಡೆದವು. ಅಸ್ತಿತ್ವದಲ್ಲಿರುವ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಪರಿಚಯಿಸುವ ಉದ್ದೇಶದಿಂದ 2020 ರ ಜುಲೈ 29ರಂದು ಕ್ಯಾಬಿನೆಟ್ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂಗೀಕರಿಸಿತು.

**ಇತಿಹಾಸ :** 1947ರ ದೇಶದ ಸ್ವಾತಂತ್ರ್ಯ ನಂತರ, ಭಾರತೀಯ ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಅನಕ್ಷರತೆಯ ಸಮಸ್ಯೆಗಳನ್ನು ಬಗೆಹರಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಾಯೋಜಿಸಿತು. ಭಾರತದ ಮೊದಲ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಮ್ ಆಜಾದ್, ಶಿಕ್ಷಣದಲ್ಲಿ ದೇಶದಾದ್ಯಂತ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಹೊಂದಲು ಶಿಕ್ಷಣದ ಮೇಲೆ ಬಲವಾದ ಕೇಂದ್ರ ಸರಕಾರದ ನಿಯಂತ್ರಣವನ್ನು ರೂಪಿಸಿದರು. ಭಾರತ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸುವ ಪ್ರಸ್ತಾಪಗಳನ್ನು ಅಭಿವೃದ್ಧಿಪಡಿಸಲು ಯೂನಿವರ್ಸಿಟಿ ಎಜುಕೇಷನ್ ಕಮಿಷನ್ (1948–1949), ಸೆಕೆಂಡರಿ ಎಜುಕೇಷನ್ ಕಮಿಷನ್ (1952–1953), ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ಮತ್ತು ಕೊಠಾರಿ ಆಯೋಗ (1964–66) ಅನ್ನು ಸ್ಥಾಪಿಸಿತು. ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಸರ್ಕಾರ ವೈಜ್ಞಾನಿಕ ನೀತಿಯ ಬಗೆಗಿನ ನಿರ್ಣಯವನ್ನು ಅಳವಡಿಸಿತು. ನೆಹರೂ ಸರ್ಕಾರ ಭಾರತೀಯ ತಂತ್ರಜ್ಞಾನ ಸಂಸ್ಥೆಯಂತಹ ಉನ್ನತ ಗುಣಮಟ್ಟದ ವೈಜ್ಞಾನಿಕ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಪ್ರಾಯೋಜಿಸಿತು. 1961 ರಲ್ಲಿ ಕೇಂದ್ರ ಸರ್ಕಾರವು ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಷ್ಟ್ರೀಯ ಕೌನ್ಸಿಲ್ ಅನ್ನು (NCERT) ಸ್ವಾಯತ್ತ ಸಂಘಟನೆಯಾಗಿ ರೂಪುಗೊಳಿಸಿತು. ಇದು ಶಿಕ್ಷಣ ನೀತಿಗಳನ್ನು ರಚಿಸುವ ಮತ್ತು ಅನುಷ್ಠಾನಗೊಳಿಸುವುದರಲ್ಲಿ ಯೂನಿಯನ್ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುತ್ತದೆ.

1968 ಕೊಠಾರಿ ಕಮಿಷನ್ (1964–1966)ರ ವರದಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಪ್ರಧಾನಿ ಇಂದಿರಾ ಗಾಂಧಿಯವರು 1968 ರಲ್ಲಿ ಶಿಕ್ಷಣದ ಮೊದಲ ರಾಷ್ಟ್ರೀಯ ನೀತಿಯನ್ನು ಪ್ರಕಟಿಸಿದರು, ಅದು "ತೀವ್ರಗಾಮಿ ಪುನರ್ರಚನೆ" ಯನ್ನು ಕರೆದು ರಾಷ್ಟ್ರೀಯ ಮಟ್ಟವನ್ನು ಸಾಧಿಸಲು ಶೈಕ್ಷಣಿಕ ಅವಕಾಶಗಳನ್ನು ಸಮಗೊಳಿಸುತ್ತದೆ. ಏಕೀಕರಣ ಮತ್ತು ಹೆಚ್ಚಿನ ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ 14 ನೇ ವಯಸ್ಸಿನವರೆಗೆ ಎಲ್ಲಾ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಪೂರೈಸುವ ಉದ್ದೇಶವನ್ನು ಹೊಂದಿದ್ದು, ಭಾರತದ ಸಂವಿಧಾನದ ಪ್ರಕಾರ ಮತ್ತು ಶಿಕ್ಷಕರ ಉತ್ತಮ ತರಬೇತಿ ಮತ್ತು ಅರ್ಹತೆ ಹೊಂದಿರುವುದು. ಪ್ರಾದೇಶಿಕ ಭಾಷೆಗಳ ಕಲಿಕೆಯ ಮೇಲೆ ಗಮನ ಕೇಂದ್ರೀಕರಿಸಬೇಕೆಂಬ ನೀತಿಯು, ಮಾಧ್ಯಮಿಕ ಶಿಕ್ಷಣದಲ್ಲಿ ಜಾರಿಗೆ ತರಲು "ಮೂರು ಭಾಷಾ ಸೂತ್ರವನ್ನು" ರೂಪಿಸಿತು – ಇಂಗ್ಲಿಷ್ ಭಾಷೆಯ ಸೂಚನೆಯು, ಶಾಲೆಯ ಆಧಾರದ ಮೇಲೆ ಹಿಂದಿಯನ್ನು ರಾಜ್ಯದ ಅಧಿಕೃತ ಭಾಷೆಯಾಗಿ, ಬುದ್ಧಿಜೀವಿಗಳ ಮತ್ತು ಜನಸಾಮಾನ್ಯರ ನಡುವಿನ ಕೊರತೆಯನ್ನು ತಗ್ಗಿಸಲು ಭಾಷಾ ಶಿಕ್ಷಣವು ಅವಶ್ಯಕವಾಗಿತ್ತು. ಹಿಂದಿ ಭಾಷೆಯನ್ನು ರಾಷ್ಟ್ರೀಯ ಭಾಷೆಯಾಗಿ ಅಳವಡಿಸಿಕೊಳ್ಳುವ ನಿರ್ಧಾರವು ವಿವಾದಾತ್ಮಕವಾಗಿದ್ದರೂ, ಎಲ್ಲಾ ಭಾರತೀಯರಿಗೆ ಒಂದು ಸಾಮಾನ್ಯ ಭಾಷೆಯನ್ನು ಉತ್ತೇಜಿಸಲು ಸಮಾನವಾಗಿ ಪ್ರೋತ್ಸಾಹಿಸಬೇಕೆಂದು ಹಿಂದಿ ಭಾಷೆಯ ಬಳಕೆ ಮತ್ತು ಕಲಿಕೆಗೆ ಈ ನೀತಿ ಕರೆ ನೀಡಿತು. ಪ್ರಾಚೀನ ಸಂಸ್ಕೃತ ಭಾಷೆಯ ಬೋಧನೆಯನ್ನೂ ಸಹ ಈ ನೀತಿಯು ಪ್ರೋತ್ಸಾಹಿಸಿತು, ಇದು ಭಾರತದ ಸಂಸ್ಕೃತಿ ಮತ್ತು ಪರಂಪರೆಯ ಒಂದು ಪ್ರಮುಖ ಭಾಗವೆಂದು ಪರಿಗಣಿಸಲ್ಪಟ್ಟಿತು. 1968 ರ ರಾಷ್ಟ್ರೀಯ ಶಿಕ್ಷಣದ ನೀತಿ (NPE) ಶಿಕ್ಷಣ ಖರ್ಚು, ರಾಷ್ಟ್ರೀಯ ಆದಾಯದ ಆರು ಪ್ರತಿಶತದಷ್ಟು ಹೆಚ್ಚಿಸಲು ಕರೆ ನೀಡಿತು. 2013 ರ ಹೊತ್ತಿಗೆ, NPE 1968 ರಾಷ್ಟ್ರೀಯ ಜಾಲತಾಣದಲ್ಲಿ ಸ್ಥಳವನ್ನು ಸ್ಥಳಾಂತರಿಸಿದೆ.

**1986 :** 1985ರ ಜನವರಿಯಲ್ಲಿ ಒಂದು ಹೊಸ ನೀತಿಯು ಅಭಿವೃದ್ಧಿಯಲ್ಲಿದೆ ಎಂದು ಘೋಷಿಸಿದ ನಂತರ, ಪ್ರಧಾನಿ ರಾಜೀವ್ ಗಾಂಧಿ ಸರಕಾರ ಮೇ 1986 ರಲ್ಲಿ ಶಿಕ್ಷಣದ ಹೊಸ ರಾಷ್ಟ್ರೀಯ ನೀತಿಯನ್ನು ಪರಿಚಯಿಸಿತು. ವಿಶೇಷವಾಗಿ ಭಾರತೀಯ ಮಹಿಳೆಯರು, ಪರಿಶಿಷ್ಟ ಪಂಗಡಗಳು ಮತ್ತು ಪರಿಶಿಷ್ಟ ಜಾತಿ (ಎಸ್ಸಿ) ಸಮುದಾಯಗಳಿಗೆ "ಅಸಮಾನತೆಗಳನ್ನು ತೆಗೆದುಹಾಕಲು ಮತ್ತು ಶೈಕ್ಷಣಿಕ ಅವಕಾಶವನ್ನು ಸಮರ್ಪಿಸಲು ವಿಶೇಷವಾದ ಒತ್ತು ನೀಡಬೇಕೆಂದು" ಹೊಸ ನೀತಿಯನ್ನು ಕರೆದಿದೆ. ಅಂತಹ ಸಾಮಾಜಿಕ ಏಕೀಕರಣವನ್ನು ಸಾಧಿಸಲು,

**ಪುಟ 9 ಕ್ಕೆ ➤**

# ಭಾರತ ಭಕ್ತ ಸತ್ಯಾನಂದ ಸ್ಟೋಕ್

■ ಹೆಚ್. ನಾಗಭೂಷಣ್ ರಾವ್
ಪೋಷಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



1947 ಆಗಸ್ಟ್ 15 ಭಾರತ ಪಾರತಂತ್ರದಿಂದ ಮುಕ್ತಿಗಳಿಸಿದ ದಿನ. ಅಂದರೆ ಮುಂದಿನ ಆಗಸ್ಟ್ 15ರವರೆಗೆ ಸ್ವಾತಂತ್ರ್ಯಗಳಿಸಿದ ಅಮೃತೋತ್ಸವ ಆಚರಣೆಯ ವರ್ಷ. ನಮ್ಮ ಸ್ವಾತಂತ್ರ್ಯಗಳಿಕೆ ಒಂದು ವರ್ಷವಲ್ಲ, ಹಲವು ವರ್ಷಗಳ, ಒಬ್ಬ ವ್ಯಕ್ತಿ, ಒಂದು ಸಂಸ್ಥೆಯದಲ್ಲ, ಲಕ್ಷಾಂತರ ಜನರ ತ್ಯಾಗ, ಬಲಿದಾನಗಳ ಗಳಿಕೆ. ಇವರಲ್ಲಿ ಅನೇಕರ ಹೆಸರುಗಳು ಇತಿಹಾಸದಲ್ಲಿ ದಾಖಲಾಗಲೇ ಇಲ್ಲ. ಅವರೆಲ್ಲಾ ಪೀಳಿಗೆ ಪೀಳಿಗೆಗಳಿಗೆ ಅನಾಮಿಕರಾಗಿ ಹೋದರು. ಸೂಜಿಮೊನೆಯಷ್ಟು ಜನರ ಹೆಸರು ನಮ್ಮ ಇತಿಹಾಸದ ಪಠ್ಯ ಪುಸ್ತಕಗಳಲ್ಲಿ ದಾಖಲಾಗಿದೆ. ಅದರಲ್ಲೂ ವಿಶೇಷವಾಗಿ ಒಂದು ಪಕ್ಷಕ್ಕೆ ಸೇರಿದವರ ಹೆಸರುಗಳೇ ಪ್ರಮುಖವಾಗಿದೆ. ಮಿಕ್ಕವರೆಲ್ಲಾ ಎಲೆಮರೆಯಕಾಯಿಗಳಂತೆ ಭಾರತದ ಜನಮಾನಸಕ್ಕೆ ಗೋಚರಿಸಲೇ ಇಲ್ಲ ಅಥವಾ ಗೋಚರಿಸಲು ಬಿಡಲೇ ಇಲ್ಲ.

19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಭಾರತ ಸ್ವಾತಂತ್ರಕ್ಕಾಗಿ ಭಾರತೀಯರಷ್ಟೇ ಅಲ್ಲ, ಹಲಕೆಲವು ಭಾರತ ಭಕ್ತ ವಿದೇಶಿಯರೂ ಶ್ರಮಿಸಿದರು. ಇವರಲ್ಲಿ ನಮಗೆ ತಿಳಿದಿರುವ ಹೆಸರುಗಳೆಂದರೆ, ಅನಿಬೆಸೆಂಟ್, ಸಿ. ಎಫ್. ಆಂಡ್ರೂಸ್, ಸೋದರಿ ನಿವೇದಿತಾ ಮಾತ್ರ. ಆದರೆ ನಮಗೆ ತಿಳಿಯದ ಓರ್ವ ಭಾರತ ಭಕ್ತನ ಬಗ್ಗೆ ಇಂದಿನ ಪೀಳಿಗೆಗೆ ತಿಳಿಸುವುದೇ ಈ ಲೇಖನದ ಉದ್ದೇಶ.

"ಸತ್ಯಾನಂದ ಸ್ಟೋಕ್ಸ್" ಈ ಹೆಸರನ್ನು ಓದಿದರೆ ವಿಚಿತ್ರ ಎನ್ನಿಸುವುದಿಲ್ಲವೇ? ನಿಜ ಈತನ ನಿಜವಾದ ಹೆಸರು ಅದಲ್ಲ, ಬದಲಿಗೆ ಸಾಮ್ಯುಯಲ್ ಇವಾನ್ಸ್ ಸ್ಟೋಕ್ಸ್ ಜೂನಿಯರ್. ಹುಟ್ಟಿದ್ದು 16–ಆಗಸ್ಟ್ 1882 ರಂದು ಅಮೇರಿಕ ದೇಶದ ಪೆನ್ಸಿಲ್ವೇನಿಯಾ ರಾಜ್ಯದ ಫಿಲಡೆಲ್ಫಿಯಾ ನಗರದಲ್ಲಿ. ತಂದೆ ಸಾಮ್ಯುಯಲ್ ಇವಾನ್ಸ್ ಸ್ಟೋಕ್ಸ್ ಸೀನಿಯರ್. ತಂದೆ ಆ ಕಾಲದಲ್ಲೇ elevatorsಗಳನ್ನು ತಯಾರಿಸುವ ಓರ್ವ ಯಶಸ್ವಿ ಉದ್ಯಮಿ. ತಂದೆಗೆ ಮಗನನ್ನು ತನ್ನ ಉದ್ಯಮದಲ್ಲಿ ತೊಡಗಿಸಿಕೊಳ್ಳುವ ಆಸೆ. ಆದರೆ ಮಗನಿಗೆ ಜೀವನದಲ್ಲಿ ಏನಾದರೂ ಉತ್ತಮವಾದದ್ದನ್ನು ಮಾಡುವ ಬಯಕೆ. 1904 ರಲ್ಲಿ ಯೇಲ್ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದ 22 ವರ್ಷದ ಯುವಕ ಸ್ಟೋಕ್ಸ್ ತನ್ನ ತಂದೆ ತಾಯಿಗಳ ವಿರೋಧದ ನಡುವೆಯೂ ಸೇವಾಕಾಂಕ್ಷಿಯಾಗಿ ಭಾರತದಲ್ಲಿನ ಹಿಮಾಚಲಪ್ರದೇಶದ ಸೋಲನ್ ಜಿಲ್ಲೆಯ ಸುಬಾತು ಎಂಬ ಊರಿನಲ್ಲಿದ್ದ ಕುಷ್ಠ ರೋಗಿಗಳ ಸೇವಾಶಿಬಿರಕ್ಕೆ ಸ್ವಯಂಸೇವಕನಾಗಿ ಸೇರ್ಪಡೆಗೊಂಡ. ತಂದೆಯ ವ್ಯಾಪಾರಕ್ಕಿಂತ ಈ ಕೆಲಸ ಅವನ ಮನಸ್ಸಿಗೆ ತೃಪ್ತಿ ಮತ್ತು ಸಂತೋಷವನ್ನು ಕೊಡುವುದಾಗಿತ್ತು. ತಮ್ಮಿಂದ ಬಹುದೂರದಲ್ಲಿದ್ದ ಮಗ ತಮ್ಮ ಪಾಲಿಗೆ ದಕ್ಕುವುದಿಲ್ಲವೆಂದು ಸುಮ್ಮನಾದರು. ಕುಷ್ಠರೋಗಿಗಳಿಗಾದರೋ ಅವನ ತೀರಾ ಅವಶ್ಯಕತೆ ಇತ್ತು. ಸ್ಟೋಕ್ಸ್ ಅವರ ಪಾಲಿನ ದೇವರಾಗಿದ್ದ. ಆ ಊರಿನ ಜನರಿಗೆ ಓರ್ವ ವಿದೇಶಿ ತಮ್ಮ ಜನರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಸ್ಟೋಕ್ಸ್ ಬಗ್ಗೆ ಅಭಿಮಾನ ಹಾಗೂ ಗೌರವ. ಸ್ಟೋಕ್ಸ್‌ನ ತಾಯ್ತಂದೆಯರಿಗೆ ತಮ್ಮ ಮಗ ಅವನ ಮನಸ್ಸಿಗೆ ಹಿಡಿಸಿದ ಒಳ್ಳೆಯ ಕೆಲಸ ಮಾಡುತ್ತಿದ್ದಾನೆ ಎಂದು ತಿಳಿದ ನಂತರ ಅವನಿಗೆ ಧಾರಾಳವಾಗಿ ಹಣ ಕಳುಹಿಸಲು ಪ್ರಾರಂಭಿಸಿದರು. ಅವನು ಆ ಹಣವನ್ನು ಕುಷ್ಠರೋಗಿಗಳ ಔಷದ ಪಥ್ಯಗಳಿಗೆ ನೀಡುತ್ತಾ, ಜೊತೆಗೆ ಸುತ್ತಮುತ್ತಲಿನ ಹಳ್ಳಿಗರಿಗೂ ನೆರವಾಗುತ್ತಾ ಅವರೆಲ್ಲರ ಅಭಿಮಾನ, ಗೌರವಗಳನ್ನೂ ಹೆಚ್ಚಿಸಿಕೊಂಡ. ಕ್ರೌರ್ಯವನ್ನು ವಿರೋಧಿಸುವ, ಅಹಿಂಸೆಯನ್ನು ಪಾಲಿಸುವ ಕ್ವಾಕೆರ್ ಎಂಬ ಕ್ರಿಶ್ಚಿಯನ್ ಧರ್ಮದಲ್ಲಿನ ಒಂದು ಪಂಥಕ್ಕೆ ಸೇರಿ, ಬಾಲ್ಯದಿಂದ ಅದರ ಸಂಸ್ಕಾರವನ್ನು ಪಡೆದ ಸಾಮ್ಯುಯಲ್ ಹಳ್ಳಿಗರ ಸಹವಾಸದಿಂದ ಭಾರತದ ಆಧ್ಯಾತ್ಮಿಕತೆಯತ್ತ ಆಕರ್ಷಿತನಾಗಿ ಸರಳವಾಗಿ ಜೀವನ ಸಾಗಿಸುತ್ತಿದ್ದ ಪರಿಯನ್ನು ಕಂಡು ಗ್ರಾಮಸ್ಥರು ಅವನನ್ನು "ಕ್ರಿಶ್ಚಿಯನ್ ಸಾಧು" ಎಂದು ಕರೆಯುತ್ತಿದ್ದರು.

ಇದೇ ಸಮಯದಲ್ಲಿ ಶಿಮ್ಲಾದಲ್ಲಿದ್ದ ಭಾರತದ ವೈಸರಾಯ್‌ರನ್ನು ಕಂಡು ಹೋಗಲು ಬಂದ ಕ್ಯಾಂಟರ್ಬರಿಯ ಆರ್ಚ್ ಬಿಷಪ್, ಕುಷ್ಠ ರೋಗಿಗಳ ಶಿಬಿರದ ಬಗ್ಗೆ ತಿಳಿದು ಅಲ್ಲಿಗೆ ಬಂದು ಸ್ಟೋಕ್ಸ್‌ನ ಸೇವಾನಿಷ್ಠೆಯನ್ನು ಕಂಡು ಅವನಿಗೆ ಕ್ರಿಶ್ಚಿಯನ್ ಸನ್ಯಾಸಿಯಾಗಲು ಪ್ರೇರೇಪಿಸಿದರು. ಸ್ಟೋಕ್ಸ್ ಎರಡೇ ವರ್ಷದಲ್ಲಿ ಭ್ರಮನಿರಸನ ಹೊಂದಿ ಅದನ್ನು ತ್ಯಜಿಸಿ ಮೊದಲ ತಲೆಮಾರಿನ ಕ್ರಿಶ್ಚಿಯನ್ ಆಗಿದ್ದ ಅವನ ಮಾವ ಆಗ್ನೆಸ್‌ನ ಮಗಳು ಆಗ್ನೆಸ್ ಬೆಂಜಮಿನ್ ಎಂಬ ಗ್ರಾಮೀಣ ಯುವತಿಯನ್ನು ಮದುವೆಯಾಗಿ ಕೋಟ್ ಘರ್ ಬಳಿ ತನ್ನ ಹೆಂಡತಿಯ ಗ್ರಾಮ ಬಾರುಬಾಗ್ ಬಳಿ ಜಮೀನನ್ನು ಖರೀದಿಸಿ ಅಲ್ಲೇ ನೆಲೆಸಿದನು. ತನ್ನ ಜಮೀನಿನಲ್ಲಿ ತರಕಾರಿ, ಗೋಧಿ, ಬಾರ್ಲಿ, ಆಲೂ ಮುಂತಾದ ಬೆಳೆಗಳನ್ನು ಬೆಳೆಯ ತೊಡಗಿದನು. "ರೋಮ್‌ನಲ್ಲಿ ರೋಮನರಂತೆ ಇರು " ಎಂಬ ಮಾತಿನಂತೆ ಅಲ್ಲಿನ ಗ್ರಾಮೀಣ ರೈತಾಪಿ ಜನರ ಉಡುಗೆ ತೊಡುಗೆ ಜೀವನ ಪದ್ಧತಿಗಳನ್ನು ಅನುಸರಿಸಿದನು. 1916 ರಲ್ಲಿ ಹಿಮಾಚಲದ ವಾತಾವರಣದಲ್ಲಿ ಆ್ಯಪಲ್ ಬೆಳೆಯಬಹುದೆಂದು ತಿಳಿದು ಅಮೇರಿಕೆಯ ಲೂಸಿಯಾನಾದಿಂದ ಹೊಸಬಗೆಯ ಆ್ಯಪಲ್ ತಳಿ ತಂದು ತನ್ನ ತೋಟದಲ್ಲಿ ಬೆಳೆಸಿದನು. ದೆಹಲಿಯಲ್ಲಿನ ತನ್ನ ಸಂಪರ್ಕದಿಂದಾಗಿ ಆ್ಯಪಲ್ ರಫ್ತು ಮಾಡಲು ಪ್ರಾರಂಭಿಸಿದನು. ತನ್ನ ಸಹಬೆಳೆಗಾರರ ಬಡತನ ಕಂಡು ಅವರೂ ಆ್ಯಪಲ್ ಬೆಳೆಯುವಂತೆ ಪ್ರೋತ್ಸಾಹಿಸಿ, ಅವರಿಗೆ ಬೇಕಾದ ಮಾರಾಟ, ರಫ್ತು ಮುಂತಾದ ನೆರವು ನೀಡಿ ಅವರೂ ಬಡತನ ನೀಗಿಸಿಕೊಳ್ಳಲು ಸಹಕರಿಸಿದನು.

ತನ್ನ 15 ವರ್ಷಗಳ ಭಾರತವಾಸದಲ್ಲಿ ಬ್ರಿಟಿಷರ ದಬ್ಬಾಳಿಕೆ, ಬಡವರ ರಕ್ತಹೀರುವ ಕಾನೂನುಗಳು, ತರುಣರನ್ನು ಸೈನ್ಯಕ್ಕೆ ಸೇರಿಸಿ ಕೊಳ್ಳುವುದರ ನೀತಿಯನ್ನು ಕಂಡು ರೋಸಿ ಹೋಗಿ ಬ್ರಿಟಿಷ್ ಆಡಳಿತದ ವಿರುದ್ಧ 1920ರಲ್ಲಿ ಹೋರಾಟ ಪ್ರಾರಂಭಿಸಿದನು. ಮಹಾತ್ಮಾ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತನಾಗಿ ಖಾದಿ ಬಟ್ಟೆ ಮಾತ್ರ ತೊಡಲು, ತಾನು ಮಾತ್ರವಲ್ಲ ತನ್ನ ಪತ್ನಿಯನ್ನೂ ಪ್ರೇರೇಪಿಸಿದನು. ಪ್ರಾರಂಭದಲ್ಲಿ ಹಿಮಾಚಲದ ಜನರ ಗೌರವ ಕಾಪಾಡಲು ಸರ್ಕಾರಕ್ಕೆ ಪ್ರತಿಭಟನಾ ಪತ್ರಗಳನ್ನು ಬರೆಯಲು ಪ್ರಾರಂಭಿಸಿದನು. ಆ ಪತ್ರಗಳಲ್ಲಿ ತನ್ನ ಜನರನ್ನು ಅವರು ಎಂದು ಸಂಭೋದಿಸದೆ ನಾವು ಎಂದು ಸಂಭೋದಿಸಿರುವುದನ್ನು ಕಂಡರೆ, ಸ್ಟೋಕ್ಸ್ ಈ ದೇಶದೊಂದಿಗೆ ಎಷ್ಟು ತಾದಾತ್ಮ್ಯವನ್ನು ಹೊಂದಿದ್ದಾನೆಂಬುದು ಅರ್ಥವಾಗುತ್ತದೆ.

1919 ರ ಜಲಿಯನ್ ವಾಲಾಭಾಗ್ ಘಟನೆ ಅವನ ಮನಸ್ಸನ್ನು ಕಲಕಿತು. ಸರ್ಕಾರದ ವಿರುದ್ಧ ಪ್ರಬಲ ಪ್ರತಿಭಟನೆ ರಾಜಕೀಯ ಹೋರಾಟದಿಂದಲೇ ಸಾಧ್ಯ ಎಂದು 1921 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದನು. 1921ರಲ್ಲಿ ಇತರೆ ಕಾಂಗ್ರೆಸ್ ನಾಯಕರೊಂದಿಗೆ ಅಂದಿನ ರಾಷ್ಟ್ರೀಯ ನಾಯಕರಾಗಿದ್ದ ಲಾಲಾ ಲಜಪತ್ ರಾಯ್‌ರೊಡಗೂಡಿ ಪ್ರಿನ್ಸ್ ಆಫ್

ಪುಟ 9 ಕ್ಕೆ ➤

# ಸ್ವಾತಂತ್ರ್ಯ ಹೋರಾಟ – ಹಿನ್ನೋಟ ಮುನ್ನೋಟ

**ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3-4 ಕಂತುಗಳು ಬರುತ್ತದೆ**

ಶ್ರೀ ಸು. ರಾಮಣ್ಣ

## ಐದು ರಂಗಗಳಲ್ಲಿನ (Fronts) ಹೋರಾಟ

### ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಮೊದಲನೆಯದಾಗಿ 1947ಕ್ಕೆ 90 ವರ್ಷಗಳ ಮೊದಲು ನಡೆದ 1857ನೇ ಸ್ವಾತಂತ್ರ್ಯ ಸಂಗ್ರಾಮ. 1757ರ ಪ್ಲಾಸೀ ಕದನದ ನಂತರ ಇಂಗ್ಲಿಷರು ಭಾರತದ ಮೇಲೆ ತಮ್ಮ ಹಿಡಿತವನ್ನು ಬಿಗಿಮಾಡುತ್ತಾ ಹೋದರು. ಇದನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮನ್ನು ಕಪ್ಪುಚರ್ಮದ ಆಂಗ್ಲೇಯರನ್ನಾಗಿ ಮಾಡುವ ಹುನ್ನಾರ. ಅವರು "ಭಾರತ"ವನ್ನು "ಇಂಡಿಯಾ" ಹಾಗೂ ಭಾರತೀಯರನ್ನು ಇಂಡಿಯನ್ನರನ್ನಾಗಿ ಮಾಡುತ್ತಾ ಹೋದರು. ಮೊದಲ ಬಾರಿಗೆ 1857ರಲ್ಲಿ ಅಸ್ಮಿತೆ ಎಚ್ಚರಗೊಂಡಿತು. "ಮಾರೋ ಫಿರಂಗೀ ಕೋ" ಎಂದು ಭಾರತೀಯ ಸೈನಿಕರು ಅಬ್ಬರಿಸಿದರು. ಇದನ್ನು ಇಂಗ್ಲಿಷರು ಸಿಪಾಯಿ ದಂಗೆ ಎಂದು ಕರೆದು, ಕ್ರಾಂತಿಯನ್ನು ತಮ್ಮ ಪ್ರಚಂಡ ಶಕ್ತಿಯಿಂದ ಹತ್ತಿಕ್ಕಿದರು. ಆದರೆ ಕ್ರಾಂತಿಶಿರೋಮಣಿ ವೀರಸಾವರ್ಕರ್, "ಅದೊಂದು ದಂಗೆ ಅಲ್ಲ; ಪ್ರಥಮ ಸ್ವಾತಂತ್ರ್ಯ ಸಂಗ್ರಾಮ" ಎಂದು ಕರೆದು, "1857 The Indian war of independence" ಎಂಬ ಅಧ್ಯಯನಪೂರ್ಣ ಗ್ರಂಥವನ್ನು ರಚಿಸಿದರು.

ಮುಂದೆ ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಅದೇ ಭಗವದ್ಗೀತೆಯಾಯಿತು. ವೀರಸೇನಾನಿ ತಾತ್ಯಾಟೋಪೆ, ನಾನಾಸಾಹೇಬ ಪೇಶ್ವೆ, ಅಜೀಮುಲ್ಲಾಖಾನ್, ಝಾನ್ಸಿರಾಣಿ ಲಕ್ಷ್ಮೀಬಾಯಿ, ಬಹದ್ದೂರ ಶಾ, ರಾಣಾ ಕುವರಸಿಂಹ, ಮಂಗಲಪಾಂಡೆ ಮೊದಲಾದವರು ಈ ಸಂಗ್ರಾಮದ ರೂವಾರಿಗಳಾಗಿದ್ದರು. ಈ ಸಂಗ್ರಾಮವು ಅತೃಪ್ತ ಸೈನಿಕರ ದಂಗೆ ಖಂಡಿತಾ ಅಲ್ಲ; ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾಗಿತ್ತು. ಏಕಸೂತ್ರತೆಯ ಅಭಾವ, ಅಶಿಸ್ತು, ಅವಸರ ಹಾಗೂ ಸಂಪನ್ಮೂಲಗಳ ಕೊರತೆ ಇತ್ಯಾದಿ ಕಾರಣಗಳಿಂದ ಈ ಸಂಗ್ರಾಮಕ್ಕೆ ಯಶಸ್ಸು ಸಿಗಲಿಲ್ಲ. ಆದರೂ ಪ್ರಾರಂಭದಲ್ಲಿ ಆಂಶಿಕವಾಗಿ ಸೈನಿಕರು ಗೆಲವು ಸಾಧಿಸಿದ್ದರು ಎಂಬುದು ಉಲ್ಲೇಖನೀಯ. ಕೆಲಕಾಲ ದೆಹಲಿಯ ವಿಮೋಚನೆಯಾಗಿ, ಬಹದ್ದೂರ ಷಾ ಚಕ್ರವರ್ತಿ ಎಂಬುದಾಗಿ ಘೋಷಣೆಯೂ ಆಗಿತ್ತು. ಆತನು ದೆಹಲಿಯಲ್ಲಿ ಗೋಹತ್ಯೆಯನ್ನು ಬಂದ್ ಮಾಡಿಸಿದ್ದ. ಸುಯೋಜಿತ, ಸಂಘಟಿತ ಹೋರಾಟ ನಡೆಯದ ಕಾರಣ ಸಂಗ್ರಾಮ ವಿಫಲವಾಯಿತಾದರೂ, ಅದು ವ್ಯರ್ಥವಾಗಲಿಲ್ಲ. ಆಂಗ್ಲರ ದೈತ್ಯಶಕ್ತಿಯ ಎದುರು ನಾವಾದರೋ ಅಸಹಾಯಕರು, ಏನೂ ಮಾಡಲಾರೆವು ಎಂಬ ಹತಾಶೆ ಕವಿದಿದ್ದ ಭಾರತೀಯ ಮನಸ್ಸಿನಲ್ಲಿ "ನಾವು ಹೋರಾಡಬಲ್ಲೆವು" ಎಂಬ ಕಿಚ್ಚನ್ನು ಹೊತ್ತಿಸಿತು ಎಂಬುದು ಸುಳ್ಳಲ್ಲ. 1857ರಲ್ಲಿ ನಾವು ಸೋತಿರಬಹುದು, ಆದರೆ, ಈ ಸೋಲಿನ ನಂತರ ಹಲವು ವರ್ಷಗಳ ಕಾಲ ಹೋರಾಟದ ಪ್ರಖರತೆ ಬೂದಿ ಮುಚ್ಚಿದ ಕೆಂಡದಂತಿದ್ದು, ಅನಂತರದ ದಿನಗಳಲ್ಲಿ ಕ್ರಾಂತಿಕಾರಿಗಳ ಪರಾಕ್ರಮದ ಬೆಂಕಿಯು ಪ್ರಜ್ವಲಿಸಲು ಸ್ಫೂರ್ತಿನೀಡಿತು.

### ಕ್ರಾಂತಿಕಾರಿಗಳ ಅಮೂಲ್ಯ ಕೊಡುಗೆ

19ನೇ ಶತಮಾನದ ಸಂಧ್ಯಾಕಾಲದಲ್ಲಿ ಮಹಾರಾಷ್ಟ್ರದ ವಾಸುದೇವ ಬಲವಂತ ಫಡಕೆ ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧವಾಗಿ ಸಶಸ್ತ್ರಕ್ರಾಂತಿಯ ಕಹಳೆಯನ್ನು ಮೊಳಗಿಸಿದ ಮೊದಲ ಕ್ರಾಂತಿಕಾರಿ. ಬ್ರಿಟಿಷರು ಅವನನ್ನು ಸೆರೆ ಹಿಡಿದು ಭಾರತದಾಚೆ ದೂರದ ಏಡನ್ನಿನ ಕಾರಾಗೃಹದಲ್ಲಿ ಕೊಳೆಸಿದರು. ಕಿಂಚಿತ್ತೂ ಕಂಗೆಡದ ಅಪ್ರತಿಮ ವೀರ ವಾಸುದೇವ ತನ್ನೊಂದಿಗೆ ಭಾರತದ ಹಿಡಿಮಣ್ಣನ್ನು ಒಯ್ದ. ಜೈಲಿನಲ್ಲಿ ನಿತ್ಯವೂ ಆ ಮಣ್ಣಿನಲ್ಲಿ ತಾಯಿ ಭಾರತಿಯನ್ನು ಕಾಣುತ್ತಾ ತನ್ನ ಜೀವನಯಾತ್ರೆಯನ್ನು ಮುಗಿಸಿ, ಹುತಾತ್ಮನಾದ. ತರುವಾಯ ಸಂಪೂರ್ಣ ಭಾರತದ ಅನ್ಯಾನ್ಯ ಪ್ರಾಂತ್ಯಗಳಲ್ಲಿ ಕ್ರಾಂತಿ ಪುಷ್ಪಗಳು ಅರಳಿದವು ಹಾಗೂ ಭಾರತಮಾತೆಯ ಚರಣಕಮಲಗಳಿಗೆ ಅರ್ಪಿಸಿಕೊಂಡವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಜನಾಂದೋಲನದ ಜತೆಜತೆಯಲ್ಲಿಯೇ ಕ್ರಾಂತಿಕಾರಿ ಸಿಂಹಗಳು ಆಂಗ್ಲಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತಲೇ ಬಂದರು ಮತ್ತು ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದರು. ದುರ್ದೈವ ಎಂದರೆ "ಅಹಿಂಸಾತ್ಮಕ" ಜನಾಂದೋಲನದ ರೂವಾರಿಯಾಗಿದ್ದ ಗಾಂಧೀಜಿ ಕ್ರಾಂತಿಕಾರಿಗಳ ಕೊಡುಗೆಯನ್ನು ಮಾನ್ಯ ಮಾಡುವುದರ ಬದಲಾಗಿ "ದಾರಿ ತಪ್ಪಿದ ದೇಶ ಭಕ್ತರು" ಎಂಬ ಹಣೆಪಟ್ಟಿಯನ್ನು ಅವರಿಗೆ ಕಟ್ಟಿದರು.

ಕ್ರಾಂತಿಕಾರಿಗಳ ಹೋರಾಟ ಹುಡುಗಾಟಿಕೆಯ ಆವೇಶದ್ದಾಗಲಿ, ಅವಿವೇಕದ ಹಿಂಸೆಯಾಗಲಿ ಅಲ್ಲ. ಕ್ರಾಂತಿಯ ಕುರಿತಾಗಿ ಅವರಿಗೆ ತಮ್ಮದೇ ಆದ ಒಂದು ತರ್ಕಪೂರ್ಣ ಚಿಂತನೆ ಮತ್ತು ಬದ್ಧತೆ ಇದ್ದವು. "ವಜ್ರದ ಉಂಗುರವನ್ನು ನುಂಗಿರುವ ತಿಮಿಂಗಿಲದ ಮುಂದೆ ಅಹಿಂಸಾತ್ಮಕ ಸತ್ಯಾಗ್ರಹ ಎನ್ನುವುದು ನಿರರ್ಥಕ. ಕೇವಲ ಶಸ್ತ್ರ ಪ್ರಯೋಗದಿಂದ ಮಾತ್ರ ತಿಮಿಂಗಿಲದ ಹೊಟ್ಟೆಯಿಂದ ಆ ಉಂಗುರವನ್ನು ಹೊರತೆಗೆಯಲು ಸಾಧ್ಯ. ಬ್ರಿಟಿಷ್ ತಿಮಿಂಗಲವು ನಮ್ಮ ಸ್ವಾತಂತ್ರ್ಯದ ಆಭರಣವನ್ನು ನುಂಗಿದೆ. ತಿಮಿಂಗಿಲದ ಹೊಟ್ಟೆಯನ್ನು ಸೀಳಿದಾಗ ಮಾತ್ರ ಸ್ವಾತಂತ್ರ್ಯ ಸಿಗಲು ಸಾಧ್ಯವೇ ಹೊರತು ಬೇರೆ ಉಪಾಯದಿಂದ ಅಲ್ಲ". ಇದು ಅವರ ತರ್ಕವಾಗಿತ್ತು. ಹೀಗಾಗಿ ಬಿಸಿ ರಕ್ತದ, ಸ್ವಾತಂತ್ರ್ಯಪ್ರೇಮಿ ತರುಣ ಕ್ರಾಂತಿಕಾರಿಗಳು ಅತ್ಯಂತ ಅಪಾಯಕಾರಿಯಾದ ದಾರಿಯನ್ನು ಸ್ವೀಕರಿಸಿ, ಪ್ರಾಣಪಣವಿಟ್ಟು ಹೋರಾಡುತ್ತಾ ಸಂತೋಷದಿಂದ ಹುತಾತ್ಮರಾದರು.

ಚಾಪೇಕರ ಬಂಧುಗಳು, ವೀರ ಸಾವರ್ಕರ್ ಸಹೋದರರು. ಶ್ಯಾಮಜೀ ಕೃಷ್ಣವರ್ಮಾ, ಮೇಡಂ ಕಾಮಾ, ಲಾಲಹರದಯಾಳ, ಮದನಲಾಲ ಧಿಂಗ್ರಾ, ರಾಮಪ್ರಸಾದ ಬಿಸ್ಮಿಲ್ಲಾ, ಅಶ್ಫಾಕ್ ಉಲ್ಲಾ, ಚಂದ್ರಶೇಖರ ಆಜಾದ್, ಭಗತಸಿಂಗ್, ರಾಜಗುರು, ಸುಖದೇವ್, ರಾಮಸಿಂಗ್‌ಕೂಕಾ, ಭಗವತಿ ಚರಣ, ಶಚೀಂದ್ರನಾಥ ಬಕ್ಷಿ, ಭಾಘಾಜತೀನ್, ಖುದೀರಾಮಬೋಸ್, ಪ್ರಫುಲ್ಲಚಾಕಿ, ಬಿರಸಾಮುಂಡಾ, ಅಲ್ಲೂರಿ ಸೀತಾರಾಮರಾಜು, ಚಿದಂಬರ ಪೀಳ್ಳೈ, ವಿ.ವಿ.ಎಸ್ ಅಯ್ಯರ್, ಸುಬ್ರಹ್ಮಣ್ಯ ಭಾರತಿ, ಬಾಬಾಸಾಹೇಬ ನರಗುಂದ, ಸಂಗೊಳ್ಳಿ ರಾಯಣ್ಣ ಹಾಗೂ ಇನ್ನೂ ಸಹಸ್ರಾರು ದೇಶಭಕ್ತರಿಗೆ ಭಾರತಮಾತೆಯ ವಿಮೋಚನೆಯ ಹೊರತು ಬೇರಾವ ಆಸೆ ಆಕಾಂಕ್ಷೆಗಳೂ ಇರಲಿಲ್ಲ. ನಿಜ! ಆ ಕನಸು ನನಸಾದದ್ದನ್ನು ಸಾವರ್ಕರ್ ಹೊರತಾಗಿ ಮಿಕ್ಕ ಯಾರೂ ಕಾಣಲಿಲ್ಲ. ಆದರೆ ತಮ್ಮ ಸ್ವಾತಂತ್ರ್ಯದ ಕನಸನ್ನು ನನಸಾಗಿಸುವ ಸಲುವಾಗಿಯೇ ತಮ್ಮ ಪ್ರಾಣಗಳ ಆಹುತಿ ನೀಡಿದರು. ●

# ಸ್ವಾಮಿ ಶ್ರದ್ಧಾನಂದರು

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ನಮ್ಮ ಪುಣ್ಯಭೂಮಿ ಭಾರತದಲ್ಲಿ ಅದೆಷ್ಟೋ ಮಹಾತ್ಮರು ಜನ್ಮ ತಾಳಿದ್ದಾರೆ. ಅವರು ರಾಷ್ಟ್ರದ ಸೇವೆಗಾಗಿ, ಧರ್ಮರಕ್ಷಣೆಗಾಗಿ ತಮ್ಮ ಸರ್ವಸ್ವವನ್ನೂ ಅರ್ಪಿಸಿದ್ದಾರೆ. ಅವರೆಲ್ಲರ ತಪಸ್ಸು, ಸ್ವಾರ್ಥತ್ಯಾಗದ ಫಲವೇ ನಾವಿಂದು ಸ್ವತಂತ್ರ ಭಾರತದಲ್ಲಿನ ಪ್ರಜೆಗಳಾಗಿರುವುದು. ಆದ್ದರಿಂದ ಅವರ ಚರಿತ್ರೆ ನಮಗೂ, ನಮ್ಮ ಮುಂದಿನ ಜನಾಂಗಕ್ಕೂ ದಾರಿದೀಪವಾಗಿದೆ. ಅವರೆಲ್ಲರ ಜೀವನಧ್ಯೇಯ, ಆದರ್ಶಗಳು ನಮಗೆ ಸದಾಕಾಲಕ್ಕೂ ಅನುಕರಣೀಯವೇ ಆಗಿರುವಂತಹುದು. ಹಾಗಾಗಿ ಮತ್ತೆ ಮತ್ತೆ ಅವರ ಚಿಂತನೆಗಳು ರಾಷ್ಟ್ರಸೇವೆಗಾಗಿ, ಧರ್ಮರಕ್ಷಣೆಗಾಗಿ ಹರಿಯುತ್ತಿದ್ದವೆಂಬುದನ್ನು ಸ್ಮರಿಸುವುದು ಅಗತ್ಯವಾಗಿದೆ.

ಇಂತಹ ಮಹಾತ್ಮರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವವರು ಮಹರ್ಷಿ ದಯಾನಂದ ಸರಸ್ವತಿಯವರು. ಅವರು ಸ್ವಾತಂತ್ರ್ಯಕಹಳೆಯನ್ನು ಊದುವುದರ ಜೊತೆಗೆ ವೇದಗಳೆಂಬ ಅಮೂಲ್ಯ ಜ್ಞಾನ ಸಂಪತ್ತಿನ ಮಹತ್ತ್ವವನ್ನು ಜಗತ್ತಿಗೇ ನಿರೂಪಿಸಿ ಹಂಚಿದವರು. ಅಂತಹವರ ಶಿಷ್ಯರಲ್ಲಿ ಪ್ರಮುಖರಾದವರು ಸ್ವಾಮಿ ಶ್ರದ್ಧಾನಂದರು. ಯಾವುದೇ ಸಮಾಜ ಅಥವಾ ಜನಾಂಗದಲ್ಲಿ ರಾಷ್ಟ್ರದ ಉನ್ನತಿಗಾಗಿ ನಿಸ್ಪೃಹರೂ, ಸ್ವಾರ್ಥತ್ಯಾಗಿಗಳೂ ಪ್ರಾಣದ ಹಂಗಿಲ್ಲದೆ ದುಡಿಯುವವರೂ ಆದಂತಹ ದೇಶಭಕ್ತರ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಮುಂದುವರಿಯಲು ಇಚ್ಛಿಸುವ ರಾಷ್ಟ್ರಪ್ರೇಮಿಗಳಿಗೆ ಸ್ಫೂರ್ತಿಯ ಸೆಲೆಯಾಗಿ ನಿಂತ ಆದರ್ಶ ವ್ಯಕ್ತಿತ್ವ " ಸ್ವಾಮಿ ಶ್ರದ್ಧಾನಂದರದು". ಮಹರ್ಷಿ ದಯಾನಂದರ ನೆರಳಿನಂತೆ ಅವರ ಎಲ್ಲ ವಿಚಾರಗಳನ್ನೂ ಕಾರ್ಯರೂಪಕ್ಕೆ ತಂದ ರಾಜರ್ಷಿ ಸ್ವಾಮಿ ಶ್ರದ್ಧಾನಂದರ ಹೆಸರು ಭಾರತದ ಇತಿಹಾಸದಲ್ಲಿ ಅಮರವಾದುದು.

ಸ್ವಾಮಿ ಶ್ರದ್ಧಾನಂದರದು ಬಹುಮುಖ ಪರಿಶ್ರಮ. ವೈಯಕ್ತಿಕ ಬದುಕಿನಲ್ಲಿ ಹೋರಾಟವನ್ನು ನಡೆಸಿದಂತೆಯೇ ದೇಶಕ್ಕಾಗಿ ಅವರ ತ್ಯಾಗ, ಬಲಿದಾನ ಸಮಾಜದ ಪ್ರೇಮಕ್ಕಾಗಿ ಕೈಗೊಂಡ ಚಟುವಟಿಕೆಗಳು, ಸೇವಾವೈವಿಧ್ಯ ಎಲ್ಲವೂ ಅನುಪಮವಾದವು. ದೇಶದ ಸ್ವಾತಂತ್ರ್ಯ, ಧರ್ಮದ ಪುನರುತ್ಥಾನ, ಶೈಕ್ಷಣಿಕ ಪ್ರಗತಿ, ಸಾಮಾಜಿಕ ಅಭಿವೃದ್ಧಿ ಹೀಗೆ ಗುರುಗಳ ಚಿಂತನೆಗಳಿಗೆ ಮೂರ್ತಸ್ವರೂಪವನ್ನು ಕೊಟ್ಟ ಧೀರ ಚೇತನ ಸ್ವಾಮಿ ಶ್ರದ್ಧಾನಂದರು.

1857ರಲ್ಲಿ ಜಲಂಧರ ಜಿಲ್ಲೆಯ ತಲ್ವನ್ ಎಂಬ ಗ್ರಾಮದಲ್ಲಿ ನಾಸಿಕಚಂದ್ರ ಎಂಬವರ ಆರನೇ ಮಗನಾಗಿ ಹುಟ್ಟಿದ ಶ್ರದ್ಧಾನಂದರ ಮೊದಲಿನ ಹೆಸರು ಮುನ್ಷೀರಾಮ ಎಂದಿತ್ತು. ತಂದೆ ಪೋಲೀಸ್ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದು ಬೇರೆ ಬೇರೆ ಸ್ಥಳಗಳಿಗೆ ವರ್ಗಾವಣೆಯಾಗುತ್ತಿದ್ದುದರಿಂದ ಮುನ್ಷೀರಾಮರ ಬಾಲ್ಯದ ಶಿಕ್ಷಣ ಅಸ್ತವ್ಯಸ್ತವಾಗಿತ್ತು. ಪ್ರಾರಂಭ ವಾರಣಾಸಿಯಲ್ಲಿಯೇ ಆದರೂ ಅದು ಸುಗಮವಾಗಿ ಮುಂದುವರಿಯಲಿಲ್ಲ. ಅನೇಕ ಅಡೆತಡೆಗಳ ನಡುವೆ ಕುಂಟುತ್ತಲೇ ಸಾಗಿತ್ತು. ಹಲವು ದುಷ್ಟ ಅಭ್ಯಾಸಗಳೂ ಮೈದುಂಬಿಕೊಂಡವು. ಕಾಲೇಜು ಜೀವನದ ಸಂದರ್ಭದಲ್ಲಿ ಮಹರ್ಷಿ ದಯಾನಂದರ ದರ್ಶನ ಮಾಡುವ, ಉಪನ್ಯಾಸ ಕೇಳುವ ಸುಯೋಗ ದೊರಕಿದ್ದೇ ಮುನ್ಷೀರಾಮರ ಬದುಕಿನಲ್ಲಿ ಮುಖ್ಯ ತಿರುವನ್ನು ತಂದಿತ್ತು. ಮುಂದೆ ಲಾಹೋರ್‌ನ ಆರ್ಯ ಸಮಾಜವನ್ನು ಸೇರಿ ವೈದಿಕ ಧರ್ಮ ಪ್ರಚಾರ ಮಾಡುವ ಸಂಕಲ್ಪ ಮಾಡಿದ್ದರೂ ನಿರಂತರ ಐದು ವರ್ಷಗಳ ಸ್ವಾಧ್ಯಾಯದ ಮೂಲಕ ವೇದ ಮಂತ್ರಗಳ ಅಧ್ಯಯನ ಮಾಡಿದ್ದರು. ಅದರ ಮಹತ್ತ್ವವನ್ನು ಅರಿತು ಸಂಪೂರ್ಣ ವೇದಗಳ ಅಧ್ಯಯನ ಕೇಂದ್ರವಿರಬೇಕೆಂದು ನಿಶ್ಚಯಿಸಿದರು. ನಗರ ಗ್ರಾಮಗಳಲ್ಲಿ ಸುತ್ತಾಡಿ ಜೋಳಿಗೆ ತುಂಬಿಸುವ ಹಣ ಸಂಗ್ರಹಿಸುವ ಕಾರ್ಯಕ್ಕಾಗಿ ವಕೀಲವೃತ್ತಿಯನ್ನು ಬಿಟ್ಟು, ಮನೆಯ ಜವಾಬ್ದಾರಿ ಬಿಟ್ಟು ಅಲೆದು 1901ರಲ್ಲಿ ಹರಿದ್ವಾರದ 'ಕಾಂಗಡಿ' ಎಂಬಲ್ಲಿ ಗುರುಕುಲ ಮಾದರಿಯಲ್ಲೇ ಇರಬೇಕೆಂಬ ನಿರ್ಧಾರದೊಂದಿಗೆ ಅದರ ಸ್ಥಾಪನೆ ಮಾಡಿದರು. ಅವರ ಸತತ ಪರಿಶ್ರಮ ಕಂಡ ಜನರು 'ಮಹಾತ್ಮಾ' ಎಂದೇ ಅವರನ್ನು ಕರೆಯತೊಡಗಿದ್ದರು. ಹದಿನೆಂಟು ವರ್ಷಗಳ ಕಾಲ ಗುರುಕುಲದ ಆಚಾರ್ಯರಾಗಿ ಅದನ್ನು ಮುನ್ನಡೆಸಿದರು. ಅಂದು ಅವರು ಸ್ಥಾಪಿಸಿದ ಗುರುಕುಲ ಇಂದು ವಿಶ್ವವಿದ್ಯಾಲಯವಾಗಿ ಬೆಳೆದು ರಾಷ್ಟ್ರೀಯ ಶಿಕ್ಷಣಸಂಸ್ಥೆಗಳಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆ. ಉತ್ತರ ಭಾರತದಲ್ಲಿಯೇ ಶೈಕ್ಷಣಿಕ ಕ್ರಾಂತಿಯನ್ನು ಮಾಡಿದ ಶ್ರೇಯಸ್ಸು ಸ್ವಾಮಿ ಶ್ರದ್ಧಾನಂದರದು.

ಸ್ವಾಮಿ ಶ್ರದ್ಧಾನಂದರು ರಾಷ್ಟ್ರದ ಕುರಿತು ಮಾಡುತ್ತಿದ್ದ ಚಿಂತನೆ ಅವರನ್ನು ಹಲವು ಕ್ಷೇತ್ರಗಳಲ್ಲಿ ಶ್ರಮಿಸುವಂತೆ ಮಾಡಿತು. 'ಸದ್ಧರ್ಮ ಪ್ರಚಾರಕ' ಎಂಬ ಉರ್ದು ಸಮಾಚಾರ ಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿಯೇ ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ನಿರ್ಭೀತ ಲೇಖನಗಳು, ಸ್ತ್ರೀಯರ ಶಿಕ್ಷಣದ ಅವಶ್ಯಕತೆ, ಅವರಿಗೆ ಸಮಾನಾಧಿಕಾರದ ಸಮರ್ಥನೆ ಮುಂತಾದ ಹಲವಾರು ವೈಚಾರಿಕ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಮುಂದೆ ಜಲಂಧರದಲ್ಲಿ ಪ್ರಸಿದ್ಧ ಆರ್ಯಕನ್ಯಾಕುಮಾರಿ ವಿದ್ಯಾಲಯದ ಸ್ಥಾಪನೆಯಾಗಲು ಪತ್ರಿಕೆಯಲ್ಲಿನ ಲೇಖನ ಮಾಲೆಯೇ ಪ್ರೇರಣೆ ನೀಡಿತ್ತು.

ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ದೇಶದ ರಾಜಕೀಯ ಸ್ವಾತಂತ್ರ್ಯ ಸಂಪೂರ್ಣಪರಾಧೀನವಾಗಿ ಬ್ರಿಟಿಷ್ ಆಡಳಿತದ ಕಪಿಮುಷ್ಟಿಯಲ್ಲಿ ದೇಶವು ಸಿಕ್ಕಿತ್ತು. ಎಲ್ಲೆಲ್ಲೂ ಜಾತಿಪದ್ಧತಿ, ಅನಕ್ಷರತೆ, ಬಾಲ್ಯವಿವಾಹ, ಅನೈಕ್ಯತೆಗಳು ತಾಂಡವವಾಡುತ್ತ ಜನಾಂಗ ಛಿದ್ರಛಿದ್ರವಾಗಿತ್ತು. ಆಗ ಸ್ವಾಮಿ ಶ್ರದ್ಧಾನಂದರು ಕೈಗೊಂಡ ಕಾರ್ಯಗಳು ಒಂದೆರಡಲ್ಲ. ಸಾರ್ವದೇಶಿಕ ಆರ್ಯಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಅದರ ಪ್ರಧಾನರಾದರು. ರಾಷ್ಟ್ರೀಯ ಏಕತೆಗೆ ಪೂರಕವೆಂದು ಹಿಂದೀಭಾಷೆಯ ಪ್ರಚಾರ ಮಾಡಿದರು. ಗಾಂಧೀಜೀಯವರ ಜೊತೆ ಸೇರಿ ಕಾಂಗ್ರಸ್ಸಿನಲ್ಲಿ ಕೆಲಸ ಮಾಡಿದರು. ರಾಜನೀತಿಯಲ್ಲಿ ಭಾಗವಹಿಸಿದರು. ಅಸ್ಪೃಶ್ಯತಾ ನಿವಾರಣೆಗೆ ಪ್ರಯತ್ನಿಸಿದರು. ನಾರೀಶಿಕ್ಷಣಕ್ಕಾಗಿ ಡೆಹರಾಡೂನಿನಲ್ಲಿ ಕನ್ಯಾಗುರುಕುಲ ಪ್ರಾರಂಭಿಸಿದರು. ಸೈನಿಕರಂತೆ ಅಸಹಕಾರ ಆಂದೋಲನದಲ್ಲಿ ಪಾಲ್ಗೊಂಡರು. ಆಂಗ್ಲಪತ್ರಿಕೆಯೊಂದನ್ನು ಪ್ರಾರಂಭಿಸಿದರು. ಬ್ರಿಟಿಷ್ ಚಕ್ರಾಧಿಪತ್ಯವನ್ನು ಭಾರತದಲ್ಲಿ ಅಲುಗಾಡಿಸಿದ ವೀರ ಸನ್ಯಾಸಿಯೆನಿಸಿದರು. ಯಾರಿಗೂ ಅಂಜದೆ ದಿಟ್ಟತನದಿಂದ ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸುತ್ತ ಗುಂಡಿಗೆ ಎದೆಯೊಡ್ಡಿ ನಿಂತ ಮಹಾನ್ ಸಾಹಸಿಯೆನಿಸಿದರು. ಹಿಂದೂ ಧರ್ಮದ ವಿಚಾರಗಳ ಶ್ರೇಷ್ಠತೆಯನ್ನು ಪ್ರತಿಪಾದಿಸಿದವರು.

ದೆಹಲಿಯ 'ಘಂಟಾಘರ್' ಎಂಬ ದೊಡ್ಡ ಚೌಕದಲ್ಲಿ ಕಾಂಗ್ರೆಸ್ ಸಭೆ ಆಯೋಜನೆಗೊಂಡಿತ್ತು. ತುಂಬಿದ ಜನಸಂದಣಿಯಲ್ಲಿ ಕ್ಯಾಪ್ಟನ್ ಸ್ಲೋಕ್ಸ್ ಎಂಬ ಬ್ರಿಟಿಷ್ ಅಧಿಕಾರಿ ಗುಂಡುಹಾರಿಸಲು ಬಂದ. ಏಕೆಂದರೆ ದೆಹಲಿ ಬಂದ್ ಮಾಡಿಸಲಾಯಿತು. ಆಗ ಶ್ರದ್ಧಾನಂದರು ಅವನಿಗೂ ಜನರಿಗೂ ನಡುವೆ ನಿಂತು ತಮ್ಮ ಕೋಟಿನ ಗುಂಡಿ ಬಿಚ್ಚಿ ಎದೆಯೊಡ್ಡಿ 'ನನಗೆ ಮೊದಲು ಗುಂಡು ಹಾರಿಸು' ಎಂದಿದ್ದರು. ನಂತರ ವೈಸರಾಯ್ ಕಡೆಯ ವ್ಯಕ್ತಿ ಬಂದು ಗಲಾಟೆ ಶಾಂತವಾಗಿತ್ತು. ಇಂತಹ ಪ್ರಚಂಡ ಧೈರ್ಯ ಸ್ವಾಮಿ ಶ್ರದ್ಧಾನಂದರದು. ಅವರ ವಾದವೇ ಹಾಗಿತ್ತು. 'ಚಳುವಳಿ ಪ್ರಾರಂಭಿಸುವುದು, ಅಂಜುಬುರುಕರ ಹಾಗೆ ನಿಲ್ಲಿಸುವುದು, ಹೀಗೆ ಮಾಡಿದರೆ ಸ್ವರಾಜ್ಯ ಬರೋದಿಲ್ಲ. ಬ್ರಿಟಿಷರನ್ನು ದುರ್ಬಲರನ್ನಾಗಿ ಮಾಡಬೇಕು. ಆಗಲೇ ನಮ್ಮ ಕಾರ್ಯ

ಪುಟ 9 ಕ್ಕೆ ➤

# ಶೈಕ್ಷಣಿಕ ಪರಿವಾರದ ಪರಿವರ್ತನೆಗೆ ನಾವು ಶ್ರಮಿಸಬೇಕು : ಮಹೇಂದ್ರ ಕಪೂರ್

ಬೆಂಗಳೂರು : ಧ್ಯೇಯವನ್ನು ತಲುಪಲು ಅವಿರತವಾಗಿ ಶ್ರಮಿಸಿ, ಶೈಕ್ಷಣಿಕ ಪರಿವಾರದ ಪರಿವರ್ತನೆಗೆ ನಾವು ಜೀವನದಲ್ಲಿ ಶ್ರಮಿಸುತ್ತೇವೆ ಎಂಬುದು ಪ್ರತಿಯೊಬ್ಬ ಶಿಕ್ಷಕರ ಧ್ಯೇಯವಾಗಬೇಕು ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ರಾಷ್ಟ್ರೀಯ ಸಂಘಟನಾ ಮಂತ್ರಿಗಳಾದ ಮಹೇಂದ್ರ ಕಪೂರಜೀ ಹೇಳಿದರು.

ನಗರದ ಶೇಷಾದ್ರಿಪುರಂನಲ್ಲಿರುವ ಯಾದವಸ್ಮೃತಿಯ ಕೆ.ಆರ್.ಎಂ.ಎಂ.ಎಸ್ ರಾಜ್ಯ ಕಾರ್ಯಾಲಯದ ಸಭಾಂಗಣದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶಿಕ್ಷಕ ಸಂಘದ ಸಂಲಗ್ನತೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದಿನಾಂಕ 26.09.21ರ ರವಿವಾರ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಕಾರ್ಯಕಾರಣಿ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ತೀರ್ಥಕ್ಷೇತ್ರದ ಪ್ರವಾಸ ಮಾಡುವಾಗ ಹೇಗೆ ನಾವು ಭಗವಂತನ ಬಗ್ಗೆ ಧ್ಯಾನಿಸುತ್ತೇವೆಯೋ, ಹಾಗೆಯೇ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಬಗ್ಗೆ ಮಾತ್ರವೇ ಚಿಂತಿಸಬೇಕಾಗಿದೆ ಎಂದು ಶಿಕ್ಷಕರಿಗೆ ತಿಳಿಸಿದರು.

ವಿದ್ಯಾರ್ಥಿಗಳ ಸಮಸ್ಯೆ ತನ್ನದೆಂದು ಶಿಕ್ಷಕ ಭಾವಿಸಿದಾಗ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ ಮಾಡಲು ಸಾಧ್ಯ. ಸಮಾಜದ ನೇತೃತ್ವವನ್ನು ವಹಿಸಲಿರುವ ವಿದ್ಯಾರ್ಥಿಗಳನ್ನು ಶಿಕ್ಷಕರು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಬೋಧನಾ ಕಾರ್ಯವನ್ನು ಮಾಡಿ, ಪ್ರತಿಶಾಲೆಯನ್ನು ಗುರುಕುಲವನ್ನಾಗಿಸುವತ್ತ ಶಿಕ್ಷಕನ ಪಾತ್ರ ಹೆಚ್ಚಿದೆ ಎಂದು ತಿಳಿಸಿದರು.

ಶಿಕ್ಷಕರಾದವರು ಇಂದಿನ ತಂತ್ರಜ್ಞಾನದ ಜೊತೆಜೊತೆಗೆ ಸಾಗಿ ಶಿಕ್ಷಣದ ಗುಣಮಟ್ಟ ವೃದ್ಧಿಸುವಲ್ಲಿ ತಮ್ಮ ಪಾತ್ರ ಹೆಚ್ಚಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಪ್ರೊ. ಸಂದೀಪ ಬೂದಿಹಾಳ ಮಾತನಾಡಿ, ಪೂರ್ಣ ಯೋಜನೆ ಮತ್ತು ಸತತ ಪ್ರಯತ್ನಗಳಿಂದ ಸಂಘಟನೆಗಳು ಬೆಳೆಯುತ್ತವೆ ಎಂದು ಹೇಳಿದರು.

ಮುಂದಿನ 3 ವರ್ಷಗಳ ಯೋಜನೆಗಳು ತಯಾರಾದವು, ಯಾವ ಜಿಲ್ಲೆಗಳಲ್ಲಿ ಕೆ.ಆರ್.ಎಂ.ಎಸ್.ಎಸ್ ಕಾರ್ಯಭಾರವಿಲ್ಲವೋ ಅಂತಹ ಜಿಲ್ಲೆಗಳಲ್ಲಿ ಕಾರ್ಯವಿಸ್ತಾರವನ್ನು ಮಾಡಿ ತಾಲೂಕು ಹಂತದವರೆಗೆ ಕಾರ್ಯಚಟುವಟಿಕೆಯನ್ನು ವಿಸ್ತರಿಸುವುದು ಮತ್ತು ಮಹಿಳಾ ಕಾರ್ಯ ವಿಸ್ತಾರದ ದೃಷ್ಟಿಯಿಂದ ಅನೇಕ ಕಾರ್ಯ ತಂತ್ರಗಳನ್ನು ನಿರ್ಣಯಿಸಲಾಯಿತು. ಪ್ರವಾಸಿ ಕಾರ್ಯಕರ್ತರ ಪಟ್ಟಿಯನ್ನು ಸಿದ್ಧಗೊಳಿಸುವುದರ ಜೊತೆಗೆ ಪೂರ್ಣಾವಧಿ ಕಾರ್ಯಕರ್ತರ ಯೋಜನೆಯನ್ನು ರಾಜ್ಯಾಧ್ಯಕ್ಷರು ಸಿದ್ಧಗೊಳಿಸಿದರು.

ಕಾರ್ಯಕ್ರಮದಲ್ಲಿ ಎಬಿಆರ್‌ಎಸ್‌ಎಂನ ಸಹ ಸಂಘಟನಾ ಕಾರ್ಯದರ್ಶಿಗಳಾದ ಲಕ್ಷ್ಮಣ್‌ಜೀ ಮಾತನಾಡಿ, 3ವರ್ಷದ ಯೋಜನೆಯನ್ನು ಹಾಕಿಕೊಂಡಿರುವ ಕೆ.ಆರ್.ಎಂಎಸ್‌ಎಸ್ ಕಾರ್ಯವೈಖರಿಯನ್ನು ಶ್ಲಾಘಿಸಿದ್ದಲ್ಲದೆ, ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿದರು.

ನನ್ನ ಶಾಲೆ ನನ್ನ ತೀರ್ಥಕ್ಷೇತ್ರ ಸ್ವಾತಂತ್ರದ 75ನೇ ವರ್ಷಾಚರಣೆಯ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳನ್ನು ನವೀಕರಣ ಮಾಡಿ ಮಾದರಿ ಶಾಲೆಗಳನ್ನು ಮಾಡುವ ಉದ್ದೇಶವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಒಳಗೊಂಡಿದೆ. ಕಾರ್ಯಕ್ರಮದಲ್ಲಿ ನನ್ನ ಶಾಲೆ ನನ್ನ ತೀರ್ಥಕ್ಷೇತ್ರ ಪೋಸ್ಟರ್‌ನ್ನು ಎ.ಬಿ.ಆರ್.ಎಸ್.ಎಂ ನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಮಹೇಂದ್ರ ಕಪೂರ ಜೀ ಮತ್ತು ಎ.ಬಿ.ಆರ್.ಎಸ್.ಎಂ ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧಾನಕೇರಾ ಜೀ ಬಿಡುಗಡೆ ಮಾಡಿದರು.

2021ರ ಆಗಸ್ಟ್ 15ರಿಂದ 2022ರ ಆಗಸ್ಟ್ 15ರೊಳಗೆ 75 ಶಾಲೆಗಳನ್ನು ಗುರುತಿಸಿ ಶಾಲೆಗೆ ಸುಣ್ಣ–ಬಣ್ಣ, ಗೋಡೆಬರಹ, ಮೈದಾನ ಸಿದ್ಧತೆ, ಮಕ್ಕಳಿಗೆ ಕಲಿಕಾ ಪೂರಕ ವಾತಾವರಣ ಸೃಷ್ಟಿ ಮಾಡುವ ಗುರಿ ಹೊಂದಿರುವುದಾಗಿ ತಿಳಿಸಿದರು.

ಶಾಲೆಗಳಲ್ಲಿ ಭಾರತಮಾತೆಯ ಪೂಜೆ, ಚಿಂತನ ಮಂಥನ, ಮಕ್ಕಳಲ್ಲಿ ಭಜನೆ, ಆಧ್ಯಾತ್ಮಿಕತೆ, ಸ್ವಚ್ಛತೆ ಮತ್ತು ಎಲ್ಲ ಶಾಲೆಗಳಿಗಿಂತ ವಿಭಿನ್ನ ಶಾಲೆಯಾಗಿದೆ ಮತ್ತು ಅದು ಸಮಾಜಕ್ಕೆ ಪೂರಕ ಮತ್ತು ಆದರ್ಶ ಶಾಲೆಯಾಗಲೂ ಆ ಶಾಲೆಯಲ್ಲಿರುವ ನಮ್ಮ ಕೆ.ಆರ್.ಎಂ.ಎಸ್.ಎಸ್ ನ ಸ್ವಯಂಸೇವಕರು ಆಗಬೇಕೆಂಬ ಹೆಮ್ಮೆ ನಮ್ಮದು ಎಂದು ಕೆ.ಆರ್.ಎಂ.ಎಸ್.ಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ ಹೇಳಿದರು.

ಕೆ.ಆರ್.ಎಮ್.ಎಸ್.ಎಸ್.ನ ಕಾರ್ಯಾಧ್ಯಕ್ಷರಾದ ಅರುಣ ಶಹಾಪೂರರವರು ಮಾತನಾಡಿ, ಯಾವ ರಾಷ್ಟ್ರದಲ್ಲಿ ಸಾರ್ವಜನಿಕ ಶಿಕ್ಷಣ ಕುಸಿಯುತ್ತದೆಯೋ ಆ ರಾಷ್ಟ್ರವೇ ಮುಂದೆ ಕುಸಿಯುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು. 50ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳು ಕರ್ನಾಟಕದಲ್ಲಿ ಸಾವಿರಾರು ಇವೆ ಮತ್ತು ಅಂತಹ ಶಾಲೆಗಳು ಕ್ರಮೇಣವಾಗಿ ನಶಿಸಿಹೋಗುತ್ತಿವೆ. ಈ ಕಾರಣಕ್ಕಾಗಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಮಾಡಬೇಕಾಗಿದ್ದು ಶಿಕ್ಷಕರ ಕರ್ತವ್ಯ. ಶಿಕ್ಷಕರು ಸರ್ಕಾರದ ಆದೇಶಕ್ಕಾಗಿ ಕಾಯದೆ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಕೆಆರ್‌ಎಂಎಸ್‌ಎಸ್ ಶಿಕ್ಷಕರಿಗೆ ಯಾವಾಗಲು ಪ್ರೇರಣೆ ನೀಡುತ್ತದೆ ಮತ್ತು ವಿವಿಧ ಸಾಧಕರನ್ನು ಸೇರಿಸಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ ಎಂದು ದಕ್ಷಿಣ ಮಧ್ಯ ಕ್ಷೇತ್ರಿಯ ಕಾರ್ಯದರ್ಶಿ ಬಾಲಕೃಷ್ಣ ಭಟ್ ಜೀ ಹೇಳಿದರು.

ಸ್ವಾಮಿ ವಿವೇಕಾನಂದರು, ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರ ಪರಂಪರೆಯಲ್ಲಿ ಹುಟ್ಟಿದವರು ನಾವು, ಅವರು ಹಾಕಿಕೊಟ್ಟ ಹಾದಿಯಲ್ಲಿ ಮತ್ತು ಅವರು ನೀಡಿದ ಮಾರ್ಗಗಳನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಅವರು ಹೇಳಿದರು. ರಾಷ್ಟ್ರಮಟ್ಟದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಕೋವಿಡ್ ಸಮಯದಲ್ಲಿ ಆನ್‌ಲೈನ್ ಪ್ಲಾಟ್‌ಫಾರ್ಮ್ ನಲ್ಲಿ ವಿವಿಧ ವಿಷಯಗಳ ಮೇಲೆ ಹಮ್ಮಿಕೊಳ್ಳಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಪ್ರಕಾಶ ಮೇಟಿ, ಸುಮತಿ.ಎಂ.ಬಿ ಮತ್ತು ಶ್ರೀಮತಿ ಅಡಿಗರವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಮತ್ತು ಶಿಕ್ಷಕ ವೃಂದದವರು ಸತ್ಕರಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ನೂರಾರು ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀಯುತ ಚಿದಾನಂದ ಪಾಟೀಲ ನಿರೂಪಿಸಿದರು, ಶ್ರೀಯುತ ಗಂಗಾಧರಾಚಾರ್ಯರವರು ಸ್ವಾಗತಿಸಿದರು, ಶ್ರೀಮತಿ ಮನೋರಮರವರು ವಂದಿಸಿದರು. ●

ಹಣ ಯಾವಾಗಲೂ ಮನಸ್ಸನ್ನು ಮಲಿನಗೊಳಿಸುತ್ತದೆ – ಶಾರದಾದೇವಿ

# ದೆಹಲಿಯ ಇಂಟರ್‌ಯುನಿವರ್ಸಿಟಿ ಸೆಂಟರ್‌ನಲ್ಲಿ ಯು.ಜಿ.ಸಿ ಕಾರ್ಯದರ್ಶಿಗಳಾದ ಡಾ. ರಜನೀಶ್ ಜೈನ್ ಅವರಿಗೆ ಕೆ.ಆರ್.ಎಂ.ಎಸ್.ಎಸ್ ಮನವಿ ಅರ್ಪಣೆ

ಹುಬ್ಬಳ್ಳಿ/ದೆಹಲಿ: ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಡಾ. ರಘು ಅಕಮಂಚಿಯವರು ಇಂದು ಯು.ಜಿ.ಸಿ ಕಾರ್ಯದರ್ಶಿಗಳಾದ ಡಾ. ರಜನೀಶ್ ಜೈನ್ ರವರಿಗೆ ಯು.ಜಿ.ಸಿಗೆ ಸಂಬಂಧಪಟ್ಟ ಶಿಕ್ಷಕರ ಬೇಡಿಕೆಗಳ ಕುರಿತು ಮಾತುಕತೆ ನಡೆಸಿ ಮನವಿ ಅರ್ಪಿಸಿದರು.

ಸಹ ಪ್ರಾಧ್ಯಾಪಕರಿಂದ, ಸಹಾಯಕ ಪ್ರಾಧ್ಯಾಪಕರಾಗಿ ಪದೋನ್ನತಿಗೆ ಇರುವ ಯು.ಜಿ.ಸಿ 2018 ನ 6.3 ನಿಯಮದಲ್ಲಿ ತಿದ್ದುಪಡಿ ತಂದು, 2021 ರಿಂದ 2025 ರವರಗರ ಪದೋನ್ನತಿಗೆ ಇರುವ ಷರತ್ತನ್ನು ವಿನಾಯಿತಿಯ ಮನವಿಗೆ ಸ್ಪಂದಿಸಿದ ಕಾರ್ಯದರ್ಶಿಗಳು ಬೇಡಿಕೆ ಈಡೇರಿಸುವ ಭರವಸೆ ನೀಡಿದರು.

ಅಧ್ಯಾಪಕರು ಸಂಶೋಧನೆಗೆ ತೊಡಗಲು ಹಿಂದೆ ಇದ್ದ ಎಫ್.ಡಿ.ಪಿ ಫ್ಯಾಕಲ್ಟಿಡೆವಲಪ್‌ಮೆಂಟ್ ಪ್ರೋಗ್ರಾಂನ್ನು ಪುನಃ ಪ್ರಾರಂಭಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗಾಗಿ ಯು.ಜಿ.ಸಿ ಮಾರ್ಗಸೂಚಿಗಳನ್ನು ಹಾಗೂ ನಡಾವಳಿಗಳನ್ನು ಅತೀ ಶಿಘ್ರ ಬಿಡುಗಡೆ ಮಾಡಬೇಕೆಂದು ಕೂಡಾ ಮನವಿ ಮಾಡಿಕೊಂಡರು.

ಕಾಲೇಜು ಅಧ್ಯಾಪಕರು ಕೂಡಾ ಸಂಶೋಧನಾ ಮಾರ್ಗದರ್ಶನ ಮಾಡಲು ಅವಕಾಶ ಕಲ್ಪಿಸಿಕೊಡಲು ವಿಶ್ವವಿದ್ಯಾಲಯಗಳಿಗೆ ಸೂಚಿಸಬೇಕೆಂದು ಕೇಳಿಕೊಂಡರು.

ರಜಾದಿನವಾಗಿದ್ದರೂ ಕೂಡ 45 ನಿಮಿಷಗಳ ಕಾಲ ಶಿಕ್ಷಕರ ಸಮಸ್ಯೆಗಳ ಬಗ್ಗೆ ಮಾತುಕತೆ ನಡೆಸಿ ನಮ್ಮ ಮನವಿ ಈಡೇರಿಸಲು ಭರವಸೆ ನೀಡಿದ ಯು.ಜಿ.ಸಿ ನವದೆಹಲಿ ಕಾರ್ಯದರ್ಶಿಗಳು ಆದ ಡಾ. ರಜನೀಶ್ ಜೈನ್ ಇವರಿಗೆ ಕೆ.ಆರ್.ಎಂ.ಎಸ್.ಎಸ್ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಧನ್ಯವಾದಗಳನ್ನು ಸಮರ್ಪಿಸಿದೆ.

ನಿಯೋಗದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಮತ್ತು ಕಾರ್ಯದರ್ಶಿಗಳಾದ ಚಿದಾನಂದ ಪಾಟೀಲ ಉಪಸ್ಥಿತರಿದ್ದರು. ●

# ಅ.ಭಾ.ರಾ.ಶೈ. ಮಹಾಸಂಘದ ಕಾರ್ಯಕಾರಿಣಿ ಬೈಠಕ್ – ಒಂದು ವರದಿ

"ಭಾರತವನ್ನು ಮೊದಲು ಕಲಿಸಿ, ಉಳಿದವುಗಳನ್ನು ನಂತರ ಕಲಿಸುವುದೇ ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿಯಾಗಿದೆ. ಭಾರತೀಯ ಸಂಸ್ಕೃತಿ, ಪರಂಪರೆಯನ್ನು ತಿಳಿಸುವುದೇ ಈ ಶಿಕ್ಷಣ ನೀತಿಯ ಗುರಿ" ಎಂದು ಕೇಂದ್ರಿಯ ರಾಜ್ಯ ಶಿಕ್ಷಣ ಮಂತ್ರಿಗಳಾದ ಶ್ರೀಯುತ ಸುಭಾಷ್ ಸರಕಾರ್‌ರವರು ದಿನಾಂಕ 17,18/10/2021 ರ ಎರಡು ದಿನಗಳು ದೆಹಲಿಯ ದೀನ್‌ದಯಾಳ್ ಉಪಾಧ್ಯಾಯ ಕಾಲೇಜ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸಂಗೋಷ್ಠಿಯಲ್ಲಿ ತಿಳಿಸಿದರು. ಈ ಸಂಗೋಷ್ಠಿಯ ಮುಖ್ಯ ವಿಷಯ " ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಕ್ರಿಯಾನ್ವಯನ– ಸವಾಲುಗಳು ಮತ್ತು ಅವಕಾಶಗಳು" ಎಂಬುದಾಗಿತ್ತು. ಎರಡು ದಿನಗಳಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಬೈಠಕ್ ಹಾಗೂ ಸಾಧಾರಣ ಸಭೆಯು ನಡೆಯಿತು.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಧ್ಯೇಯ ವಾಕ್ಯವಾದ "ರಾಷ್ಟ್ರದ ಹಿತದಲ್ಲಿ ಶಿಕ್ಷಣ, ಶಿಕ್ಷಣದ ಹಿತದಲ್ಲಿ ಶಿಕ್ಷಕರು, ಶಿಕ್ಷಕರ ಹಿತದಲ್ಲಿ ಸಮಾಜ"ದ ಬಗ್ಗೆ ಹೇಳಿದರು. ಸಂಘಟನೆಯು ವರ್ಷದಲ್ಲಿ ನಡೆಸುವ ನಾಲ್ಕು ಪ್ರಮುಖ ಕಾರ್ಯಕ್ರಮಗಳಾದ ಕರ್ತವ್ಯ ಬೋಧ ದಿವಸ್, ಯುಗಾದಿಯ ಆಚರಣೆ, ಗುರುವಂದನಾ ಹಾಗೂ ಶಿಕ್ಷಕ ಸಮ್ಮಾನಗಳ ವಿವರಣೆ ನೀಡುತ್ತಾ, ಇವೆಲ್ಲಾ ಅತ್ಯುತ್ತಮ ಕಾರ್ಯಗಳಾಗಿವೆ ಎಂದು ಹರ್ಷ ವ್ಯಕ್ತ ಪಡಿಸಿದರು. ಎಬಿಆರ್‌ಎಸ್‌ಎಮ್ ನಿಂದ ಪ್ರಕಟಣೆಯಾಗುವ ಶೈಕ್ಷಿಕ ಮಂಥನದ ಬಗ್ಗೆಯೂ ಪ್ರಶಂಸಿಸಿದರು. ಕಾರ್ಯಕ್ರಮವನ್ನು ಆಯೋಜಿಸಿದ ದೀನ್ ದಯಾಳ್ ಕಾಲೇಜಿನ ಬಗ್ಗೆಯೂ ಪ್ರಶಂಸನೀಯ ಮಾತುಗಳನ್ನಾಡುತ್ತಾ ದೀನ್ ದಯಾಳ್ ಉಪಾಧ್ಯಾಯ ಅವರು ಇಡೀ ಜಗತ್ತಿನ ಮುಂದೆ ಏಕಾತ್ಮ ಮಾನವ ಸಿದ್ಧಾಂತವನ್ನು ಇಟ್ಟಿದ್ದಾರೆ. ಶಿಕ್ಷಣವೇ ಮೋಕ್ಷದ ಮಾರ್ಗವೆಂದು ಹೇಳಿದ್ದಾರೆ. ಶಿಕ್ಷಣದ ಮೂಲಕ ಮನುಷ್ಯನ ಸರ್ವಾಂಗೀಣ ವಿಕಾಸವಾಗುತ್ತದೆಂದು ಹೇಳಿದ್ದಾರೆ ಎಂದು ಹೇಳಿದರು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಫಲಪ್ರದವನ್ನಾಗಿ ಮಾಡುವುದು ಶಿಕ್ಷಕರ ಕೈಯಲ್ಲಿಯೇ ಇದೆ ಎಂದು ಹೇಳಿದರು. ಪ್ರೊ. ಬಲರಾಮ್ ಪಾಣಿಜೀ ಯವರು ಮಾತನಾಡಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಿದರು.

ಎರಡು ದಿನ ನಡೆದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕಾರ್ಯಕಾರಿಣಿಯಲ್ಲಿ ರಾಜ್ಯಗಳಿಂದ ಬಂದಿದ್ದ ಸಂಘಟನೆಯ ಪ್ರಧಾನ ಕಾರ್ಯದರ್ಶಿಗಳು ಹಿಂದಿನ ಕಾರ್ಯಕಾರಿಣಿಯ ನಂತರ ಮಾಡಿದ ಕಾರ್ಯಗಳ ವಿವರವನ್ನು ಸಭೆಗೆ ನೀಡಿದರು. ಕಾರ್ಯಕ್ರಮದಲ್ಲಿ ಆರ್.ಎಸ್.ಎಸ್‌ನ ಬೌದ್ಧಿಕ ಪ್ರಮುಖರಾದ ಡಾ॥ ಸುನೀಲ್ ಬಾಯಿ ಮೆಹೆತಾಜಿಯವರು ಭಾಗವಹಿಸಿದ್ದರು.

ಮೂರು ವರ್ಷಕ್ಕೆ ನಡೆಯಬೇಕಾಗಿದ್ದ ಸಂಘಟನೆಯ ಚುನಾವಣೆಯನ್ನು ಕೊರೋನ ಸಂಕಷ್ಟದಿಂದ ಒಂದು ವರ್ಷ ಮುಂದೂಡಿದ್ದರಿಂದ ದಿನಾಂಕ 18.10.21 ರಂದು ಚುನಾವಣೆ ನಡೆದು ಅಧ್ಯಕ್ಷ ಸ್ಥಾನಕ್ಕೆ ಪುನಃ ಜೆ.ಪಿ ಸಿಂಘಾಲ್ ರವರು, ಪ್ರಧಾನ ಕಾರ್ಯದರ್ಶಿಯ ಸ್ಥಾನಕ್ಕೆ ಮೈಸೂರಿನ ಶ್ರೀಶಿವಾನಂದ ಸಿಂಧನಕೇರಾರವರು, ಮಹಿಳಾ ವಿಭಾಗದ ಕಾರ್ಯದರ್ಶಿಯಾಗಿ ಈ ಹಿಂದೆ ಮಹಿಳಾ ವಿಭಾಗದ ಸಹ ಕಾರ್ಯದರ್ಶಿಯಾಗಿದ್ದ ಕರ್ನಾಟಕದ ಶ್ರೀಮತಿ ಮಮತಾ ಡಿ.ಕೆಯವರು ಸರ್ವಾನುಮತದಿಂದ ಆಯ್ಕೆಯಾದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತೀಯ ಸಾಧಾರಣ ಸಭೆಯಲ್ಲಿ ಮೂರು ಪ್ರಸ್ತಾವಗಳನ್ನು ಅನುಮತಿಸಲಾಯಿತು. 1. ರಾಷ್ಟ್ರೀಯ ಶಿಕ್ಷಣ ನೀತಿಯ ಸಫಲತೆಗಾಗಿ ಸಾಮೂಹಿಕ ಪ್ರಯತ್ನವನ್ನು ಮಾಡುವುದು. 2. ಸ್ವಾತಂತ್ರ್ಯ ಅಮೃತೋತ್ಸವವು ರಾಷ್ಟ್ರೀಯ ಪುನರ್ನಿರ್ಮಾಣದ ಹಬ್ಬವಾಗಬೇಕು. 3. ಶಿಕ್ಷಣ ಮತ್ತು ಶಿಕ್ಷಕರ ಸಮಸ್ಯೆಗಳನ್ನು ದೂರಮಾಡಲು ತಡಮಾಡದೇ ಇರುವುದು. ಎರಡು ದಿನಗಳು ದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಕಾಲೇಜಿನಲ್ಲಿ ನಡೆದ ಸಭೆಯು ಪೂರ್ಣ ಯಶಸ್ವಿಯಾಯಿತು. ●

➢ ಪುಟ 3 ರಿಂದ.....

ವಿದ್ಯಾರ್ಥಿವೇತನಗಳನ್ನು ವಿಸ್ತರಿಸುವ ಶಿಕ್ಷಣ, ವಯಸ್ಕ ಶಿಕ್ಷಣ, ಎಸ್ಸಿಗಳಿಂದ ಹೆಚ್ಚಿನ ಶಿಕ್ಷಕರು ನೇಮಕ ಮಾಡಲು, ಬಡ ಕುಟುಂಬಗಳಿಗೆ ಪ್ರೋತ್ಸಾಹಕಗಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸಲು, ಹೊಸ ಸಂಸ್ಥೆಗಳ ಅಭಿವೃದ್ಧಿ ಮತ್ತು ವಸತಿ ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಕರೆನೀಡಿದ ನೀತಿ ಇದಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ "ಮಗು–ಕೇಂದ್ರಿತ ವಿಧಾನ" ಕ್ಕೆ NPE ಕರೆನೀಡಿದೆ ಮತ್ತು ರಾಷ್ಟ್ರವ್ಯಾಪಿ ಪ್ರಾಥಮಿಕ ಶಾಲೆಗಳನ್ನು ಸುಧಾರಿಸಲು "ಆಪರೇಷನ್ ಬ್ಲಾಕ್ಬೋರ್ಡ್" ಅನ್ನು ಪ್ರಾರಂಭಿಸಿತು. 1985 ರಲ್ಲಿ ರಚನೆಯಾದ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದೊಂದಿಗೆ ಮುಕ್ತ ವಿಶ್ವವಿದ್ಯಾಲಯ ವ್ಯವಸ್ಥೆಯನ್ನು ಈ ನೀತಿಯು ವಿಸ್ತರಿಸಿತು. ಗ್ರಾಮೀಣ ಭಾರತದ ಜನಸಾಮಾನ್ಯರ ಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಭಾರತೀಯ ನಾಯಕ ಮಹಾತ್ಮಾ ಗಾಂಧಿ ತತ್ವಶಾಸ್ತ್ರದ ಆಧಾರದ ಮೇಲೆ "ಗ್ರಾಮೀಣ ವಿಶ್ವವಿದ್ಯಾನಿಲಯ" ಮಾದರಿಯನ್ನು ಸೃಷ್ಟಿಸಲು ಈ ನೀತಿಯು ಕರೆ ನೀಡಿದೆ. 1986 ಶಿಕ್ಷಣ ನೀತಿ ಶಿಕ್ಷಣದ ಮೇಲೆ GDP ಯ 6% ಖರ್ಚು ಮಾಡಲು ನಿರೀಕ್ಷಿಸಲಾಗಿದೆ.

**1992 :** 1986 ರಲ್ಲಿ ಶಿಕ್ಷಣದ ರಾಷ್ಟ್ರೀಯ ನೀತಿ 1992 ರಲ್ಲಿ ಪಿ.ವಿ. ನರಸಿಂಹರಾವ್ ಸರ್ಕಾರದಿಂದ ಮಾರ್ಪಡಿಸಲ್ಪಟ್ಟಿತು. 2005 ರಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ತಮ್ಮ "ಸಾಮಾನ್ಯ ಕನಿಷ್ಠ ಕಾರ್ಯಕ್ರಮ" ಆಧಾರದ ಮೇಲೆ ಹೊಸ ನೀತಿಯನ್ನು ಅಳವಡಿಸಿಕೊಂಡು ಸಂಯುಕ್ತ ಪ್ರಗತಿಪರ ಒಕ್ಕೂಟ (ಯುಪಿಎ) ಸರ್ಕಾರ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಪಿ.ಇ) ಅಡಿಯಲ್ಲಿ 1986 ರ ಕಾರ್ಯಕ್ರಮ (ಪಿಒಎ), ಭಾರತದಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಕಾರ್ಯಕ್ರಮ (1986) ಗಳಿಗೆ ಪ್ರವೇಶಕ್ಕಾಗಿ ಎಲ್ಲಾ ಪ್ರವೇಶದಲ್ಲೂ ಸಾಮಾನ್ಯ ಪ್ರವೇಶ ಪರೀಕ್ಷೆಯ ನಡವಳಿಕೆಯನ್ನು ರೂಪಿಸಿತು. ಎಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ / ಯೋಜನಾ ಕಾರ್ಯಕ್ರಮಗಳಿಗೆ ಪ್ರವೇಶಕ್ಕಾಗಿ, ಭಾರತ ಸರ್ಕಾರ 18 ಅಕ್ಟೋಬರ್ 2001 ರ ದಿನಾಂಕದಂದು ಮೂರು ಪರೀಕ್ಷಾ ಯೋಜನೆಗಳನ್ನು (JEE ಮತ್ತು AIEEE ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆ SLEEE ಸೇರಲು ಒಂದು ಆಯ್ಕೆಯನ್ನು ನೀಡಿದೆ. ಇದು ಈ ಕಾರ್ಯಕ್ರಮಗಳಲ್ಲಿ ವಿವಿಧ ಪ್ರವೇಶ ಮಾನದಂಡಗಳನ್ನು ನೋಡಿಕೊಳ್ಳುತ್ತದೆ ಮತ್ತು ವೃತ್ತಿಪರ ಮಾನದಂಡಗಳ ನಿರ್ವಹಣೆಯಲ್ಲಿ ಸಹಾಯ ಮಾಡುತ್ತದೆ. ಇದು ಅತಿಕ್ರಮಣಗಳ ಸಮಸ್ಯೆಗಳನ್ನು ಪರಿಹರಿಸುತ್ತದೆ ಮತ್ತು ಪ್ರವೇಶ ಪರೀಕ್ಷೆಗಳ ಬಹುಸಂಖ್ಯೆಯ ಕಾರಣದಿಂದಾಗಿ ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮೇಲೆ ದೈಹಿಕ, ಮಾನಸಿಕ ಮತ್ತು ಆರ್ಥಿಕ ಹೊರೆಗಳನ್ನು ಕಡಿಮೆಗೊಳಿಸುತ್ತದೆ. ●

➢ ಪುಟ 5 ರಿಂದ.....

ಯಶಸ್ವಿಯಾಗುವುದು. ಅವರು ತುಂಬ ಖಂಡಿತವಾದಿಯಾಗಿದ್ದರು. ಸ್ವಾಮಿ ಶ್ರದ್ಧಾನಂದರ ಕೊನೆ ಮಾತ್ರ ಬಹಳ ಅನ್ಯಾಯ. 'ಮೇವ್ಸ್' ಎಂಬ ಮುಸ್ಲಿಂ ಸಮುದಾಯದವರು 'ಸಾರ್ವದೇಶಿಕ ಸಭೆ'ಗೆ ತಾವೆಲ್ಲ ಹಿಂದೂಗಳಾಗುತ್ತೇವೆಂದು ಅರ್ಜಿಹಾಕಿದ್ದರು. ಆದರೆ ಕಟ್ಟಾ ಮುಸ್ಲಿಂ ಸಂಪ್ರದಾಯಸ್ಥರು ಇದನ್ನು ವಿರೋಧಿಸಿದ್ದರು. ಆಗ ಶ್ರದ್ಧಾನಂದರು ಹೆದರದೆ ಸುಮಾರು ಒಂದು ಲಕ್ಷ ಜನ ಮೇವ್‌ಗಳು ಹಿಂದೂಗಳಾಗಲು ನೆರವಾಗಿದ್ದರು. ಕಟ್ಟಾ ಸಂಪ್ರದಾಯಸ್ಥರು ಸ್ವಾಮಿ ಶ್ರದ್ಧಾನಂದರನ್ನು ಕೊಲ್ಲಬೇಕೆಂದು ನಿರ್ಧರಿಸಿ ರಷೀದ್‌ಖಾನ್ ಎಂಬುವನನ್ನು ನಿಯೋಜಿಸಿದರು. 1926ನೇ ಇಸವಿ ಸ್ವಾಮಿ ಶ್ರದ್ಧಾನಂದರು ದೆಹಲಿಯಲ್ಲಿದ್ದರು. ಅವರಿಗೆ ಡಬಲ್ ನ್ಯುಮೋನಿಯಾ ಆಗಿತ್ತು. ಚಿಕಿತ್ಸೆಯಿಂದ ಗುಣಮುಖರಾಗುತ್ತಿದ್ದರೂ ಸಂಪೂರ್ಣವಾಗಿ ಚೇತರಿಸಿಕೊಂಡಿರಲಿಲ್ಲ. ಆ ಸಮಯದಲ್ಲಿ ಅವರು ಮಂಚದ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದಾಗ ರಷೀದ್‌ಖಾನ್ ಅವರ ಭೇಟಿಗೆ ಹೋಗಿದ್ದನು.

ಸ್ವಾಮಿ ಶ್ರದ್ಧಾನಂದರ ಸಹಾಯಕ 'ಧರ್ಮಸಿಂಹ' ಎಂಬಾತನನ್ನು ಕುಡಿಯುವ ನೀರಿಗೆ ಒಳಗೆ ಕಳುಹಿಸಿ ತಾನು ಅತಿ ಸಮೀಪದಿಂದ ಶ್ರದ್ಧಾನಂದರಿಗೆ ಗುಂಡುಹಾರಿಸಿಬಿಟ್ಟಿದ್ದ. ಆಗ ಅವರಿಗೆ ಎಪ್ಪತ್ತು ವರ್ಷ. ಶ್ರದ್ಧಾನಂದರು ದೇಶಕ್ಕಾಗಿ ಬಲಿದಾನ ಮಾಡಿ ಹುತಾತ್ಮರಾಗಿದ್ದರು. ಅವರೆಂದೂ ಮುಸ್ಲಿಂ ವಿರೋಧಿಯಾಗಿರಲಿಲ್ಲ. ಎಲ್ಲರನ್ನೂ ಪ್ರೀತಿಸುತ್ತಿದ್ದರು. ಅವರೆಂದೂ ಮುಸ್ಲಿಂ ವಿರೋಧಿಯಾಗಿರಲಿಲ್ಲ. ಎಲ್ಲರನ್ನೂ ಪ್ರೀತಿಸುತ್ತಿದ್ದರು. ಹಾಗೆಯೇ ಮುಸ್ಲಿಂ ಜನಾಂಗದವರೂ ಅವರಿಗೆ ವಿರೋಧಿಗಳೇನೂ ಆಗಿರಲಿಲ್ಲ. ಭಾರತದ ಇತಿಹಾಸದಲ್ಲಿ ಸ್ವಾಮಿ ಶ್ರದ್ಧಾನಂದರು ಅಮರರಾದರು. ●

➢ ಪುಟ 4 ರಿಂದ.....

ವೇಲ್ಸ್ ಎಡವರ್ಡ್ VIII ಭಾರತಕ್ಕೆ ಬರುವುದನ್ನು ವಿರೋಧಿಸಲು ನಡೆಸಿದ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸವನ್ನೂ ಅನುಭವಿಸಿದನು. ಅವನು 1921ರಲ್ಲಿ ಪೋಲೀಸರ ಬಂಧನಕ್ಕೆ ಒಳಗಾದಾಗ ಗಾಂಧೀಜಿ ನೀಡಿದ ಹೇಳಿಕೆ, "ಆತನು ತಾನೂ ಭಾರತೀಯನೆಂದು ಭಾವಿಸಿ, ಭಾರತೀಯರ ದುಃಖದಲ್ಲಿ ಒಂದಾಗಿ, ಸ್ವಾತಂತ್ರದ ಚಳುವಳಿಯಲ್ಲಿ ಧುಮುಕಿ ಬ್ರಿಟಿಷ್ ಸರ್ಕಾರದ ಅವಕೃಪೆಗೆ ಪಾತ್ರನಾಗಿದ್ದಾನೆ. ಸರ್ಕಾರವನ್ನು ವಿರೋಧಿಸಲು ಆತನನ್ನು ಬಿಡುವುದು ಅವರಿಗೆ ಸಹಿಸಲಾಗುವುದಿಲ್ಲ. ಆತನ ಬಿಳಿ ಚರ್ಮ ಕೂಡ ಆತನ ರಕ್ಷಣೆಗೆ ಬರದಾಯಿತು".

ಜೈಲ್ ಇಂದ ಹೊರಬಂದ ಸ್ಟೋಕ್ಸ್ 1924 ರಲ್ಲಿ ತನ್ನ ಗತಿಸಿದ ಮಗನ ನೆನಪಿನಲ್ಲಿ 'ತಾರಾ ಹೈಸ್ಕೂಲ್' ಎಂಬ ಶಾಲೆಯನ್ನು ತೆರೆದು ಸ್ಥಳೀಯ ಬಡ ಮಕ್ಕಳಿಗೆ ಪ್ರಕೃತಿಯ ಮಧ್ಯೆ ಹಿಂದಿ ಇಂಗ್ಲಿಷ್ ಮತ್ತು ಧಾರ್ಮಿಕ ಪಾಠದ ಜತೆ ತೋಟಗಾರಿಕೆ, ಸ್ವರಕ್ಷಣೆಯನ್ನೂ ಕಲಿಸುತ್ತಿದ್ದನು. ಸತ್ತ ಮಗನ ನೆನಪು ಮರೆಯಲಾಗದ ಸ್ಟೋಕ್ಸ್ 1932ರಲ್ಲಿ, ಆರ್ಯಸಮಾಜದ ವಿಧಿ ವಿಧಾನದೊಂದಿಗೆ ಕುಟುಂಬಸಮೇತ ಹಿಂದೂ ಧರ್ಮವನ್ನು ಸ್ವೀಕರಿಸಿ ತನ್ನ ಹೆಸರನ್ನು ಸಾಮ್ಯುಯಲ್ ಈವಾನ್ಸ್ ಬದಲಿಗೆ ಸತ್ಯಾನಂದ ಸ್ಟೋಕ್ಸ್ ಎಂದೂ ತನ್ನ ಮಡದಿಯ ಹೆಸರನ್ನು ಆಗ್ನೆಸ್ ಬದಲಿಗೆ ಪ್ರಿಯಾದೇವಿ ಎಂದೂ ಬದಲಾಯಿಸಿಕೊಂಡನು. ಕೆಲವು ಸಾಧುಗಳಿಂದ ಪ್ರೇರಿತನಾಗಿ ಭಗವದ್ಗೀತೆ ಮತ್ತು ಉಪನಿಷದ್‌ಗಳನ್ನೂ ಓದಲು ಪ್ರಾರಂಭಿಸಿದನು. ಅದರ ಅರ್ಥವನ್ನು ಸರಿಯಾಗಿ ಅರಿಯಲು ಸಂಸ್ಕೃತವನ್ನೂ ಕಲಿತನು.

1937 ರಲ್ಲಿ ಸಿಮ್ಲಾದ ತನ್ನ ಮನೆಯ ಬಳಿ ಸತ್ಯಾನಂದನು 'ಪರಮಜ್ಯೋತಿಮಂದಿರ' ಎಂಬ ದೇಗುಲವನ್ನು ನಿರ್ಮಿಸಿದನು. ಅದರಲ್ಲಿ ಹೋಮ ಕುಂಡವಲ್ಲದೆ ಭಗವದ್ಗೀತೆ ಮತ್ತು ಉಪನಿಷದ್‌ನ ಆಯ್ಕೆಗೊಂಡ ವಾಕ್ಯಗಳನ್ನೂ ಕೆತ್ತಿಸಿದನು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯಾನಂದನ ಪಾತ್ರ ಬಹಳ ಜನರಿಗೆ ತಿಳಿಯದು.

ಆತನೊಬ್ಬ ಧ್ಯೇಯವಾದಿ, ಹೋರಾಟಗಾರ, ಸಾಮಾಜಿಕ ಪರಿವರ್ತನಕಾರ ಮತ್ತು ರಾಜಕೀಯ ಕಾರ್ಯಕರ್ತ. ಸಿಮ್ಲಾದ ಕೋಟ್ ಘರ್‌ನ ಜನರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ತನ್ನ ಇಡೀ ಜೀವನವನ್ನು ಸ್ವಾರ್ಥರಹಿತನಾಗಿ ಮುಡುಪಿಟ್ಟ ಮಹಾನುಭಾವ.

ನಿಸ್ವಾರ್ಥವಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸತ್ಯಾನಂದ, ಭಾರತಕ್ಕೆ ಸ್ವಾತಂತ್ರ್ಯ ಬರುವ 14 ತಿಂಗಳ ಮುನ್ನ ಮೇ 14, 1946 ರಂದು ಕೈಲಾಸವಾಸಿಯಾದ.

ಹಿಮಾಚಲದ ಧರ್ಮಶಾಲಾದಲ್ಲಿ ಕೇಂದ್ರವನ್ನು ಹೊಂದಿರುವ ಪೂಜ್ಯ ದಲೈಲಾಮಾ ಅವರು ಸತ್ಯಾನಂದನ ಜೀವನ ಸಿದ್ಧಾಂತದ ಬಗ್ಗೆ ಹೇಳಿರುವ ಮಾತಿನೊಂದಿಗೆ ಲೇಖನ ಮುಕ್ತಾಯಗೊಳಿಸುವೆ.

"The true expression of nonviolence is compassion. Some people seem to think that compassion is just a passive emotional response instead of a rational stimulus to action. But to experience genuine ed with a sense of responsibility for their welfare." ●

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

**ನಮ್ಮ ಸ್ವತಂತ್ರ ಭಾರತದ ಅಮೃತೋತ್ಸವದ ಸುಸಂದರ್ಭದಲ್ಲಿ ನಮ್ಮ ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ವೀರ ಯೋಧರ ಸಂಕ್ಷಿಪ್ತ ಪರಿಚಯವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶದಿಂದ ಈ ಸರಣಿಯನ್ನು ಪ್ರಾರಂಭಿಸಲಾಗಿದೆ.**

## ಸ್ವಾತಂತ್ರ್ಯವೀರ ಸಾವರ್ಕರ್

ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್‌ರವರ ಜನನ 28–05–1883ರಲ್ಲಿ ಆಯಿತು. ಬಾಲ್ಯದಲ್ಲಿ ಕವಿತೆಗಳಿಂದ, ಕಾಲೇಜು ದಿನಗಳಲ್ಲಿ ಹಾಗೂ ತಾರುಣ್ಯದಲ್ಲಿ ಮಿತ್ರರೊಡಗೂಡಿ ದೇಶದ ಸ್ವಾತಂತ್ರ್ಯಕ್ಕಾಗಿ ಯೋಜನೆಗಳನ್ನು ರೂಪಿಸುತ್ತಿದ್ದರು. ಸ್ವಾತಂತ್ರ್ಯ ಗಳಿಕೆಗಾಗಿ ಪ್ರಾಣಾರ್ಪಣೆಗೂ ಯುವಕರನ್ನು ಪ್ರೇರೇಪಿಸುತ್ತಿದ್ದರು.

ಸಾವರ್ಕರರು ಅವರೊಬ್ಬ ಅದ್ಭುತ ಮಾತುಗಾರರಾಗಿದ್ದರು. ಸುಮ್ಮನಿದ್ದರೆ ಅವರಷ್ಟು ಸೌಮ್ಯವಾದಿ ಯಾರೂ ಇಲ್ಲ. ಕೆಣಕಿದರೆ ಉರಿಯುವ ಬೆಂಕಿಯಂತಿದ್ದರು. ಗೋಪೂಜೆಗಿಂತ ಗೋರಕ್ಷಣೆ ಅವರ ಪಾಲಿಗೆ ಬಹು ಮುಖ್ಯವಾಗಿತ್ತು. ಏಕೆಂದರೆ ಗೋವು ರಾಷ್ಟ್ರೀಯ ಸಂಪತ್ತು ಎಂಬುದು ಅವರ ನಿಲುವಾಗಿತ್ತು. ಲೇಖಕರಾಗಿ ಸಾವರ್ಕರರ ಸಾಧನೆಯೂ ಅಪ್ರತಿಮವಾದುದು.

ಬ್ರಿಟಿಷ್ ಸರ್ಕಾರ ಸಾವರ್ಕರರ ಮೇಲೆ ಆರೋಪಗಳ ಮಳೆಗರೆದಿತ್ತು. ಸಾವರ್ಕರರಿಗೆ ನ್ಯಾಯಾಧೀಶರು ಆಜನ್ಮಪರ್ಯಂತ ಕರಿನೀರಿನ ಶಿಕ್ಷೆಯನ್ನು ವಿಧಿಸಿದರು. ಇಂತಹ ಎದೆ ಬಿರಿಯುವ ಶಿಕ್ಷೆಯ ಅವಧಿ ಕೇಳಿದಾಗಲೂ ಅವರು ವಿಚಲಿತರಾಗಲಿಲ್ಲ. ಏಕೆಂದರೆ ಸಾವರ್ಕರ್ ಅಪ್ಪಟ ದೇಶಭಕ್ತರಾಗಿದ್ದರು. ಅಂಡಮಾನ್ ಜೈಲಿನಲ್ಲಿ ಅತಿ ಕಠಿಣವಾದ ಗಾಣದ ಕೆಲಸದ ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಜೈಲಿನಲ್ಲೂ ದೇಶಭಕ್ತಿ, ರಾಜಕೀಯ ಪಾಠವನ್ನು ತರುಣ ಕೈದಿಗಳಿಗೆ ಹೇಳುತ್ತಿದ್ದರು. ಜೈಲಿನಲ್ಲಿ ಕಾಗದ–ಲೇಖನಿಯನ್ನು ಬರೆಯಲು ನೀಡುತ್ತಿರಲಿಲ್ಲ. ಆಗ ಸಾವರ್ಕರ್ ಕಾವಲುಗಾರನಿಗೆ ಹೇಳಿ ಒಂದು ಮೊಳೆಯನ್ನು ಪಡೆದು ಅದರಿಂದ ಸುಣ್ಣ ಬಳಿದ ಗೋಡೆಯ ಮೇಲೆ ಕವನ ಹಾಗೂ ದೇಶಭಕ್ತಿ ಮೊಳಗಿಸುವ ವಾಕ್ಯಗಳನ್ನು ಕೆತ್ತುತ್ತಿದ್ದರು.

ಒಟ್ಟಿನಲ್ಲಿ ಪ್ರಖರ ವಾಗ್ಮಿಯಾಗಿ, ಚತುರ ನಾಟಕಕಾರರಾಗಿ, ತೀಕ್ಷ್ಣ ಚಿಂತಕರಾಗಿ ಆಳವಾದ ಚಿಂತನೆಗಳ ಕೃತಿ ರಚಿಸಿ ಸಾವರ್ಕರ್, ತಾಯಿ ಭಾರತಿಗೆ ಸುಗಂಧ ಪುಷ್ಪಗಳನ್ನು ಅರ್ಪಿಸಿದ ಮಹಾನ್ ದೇಶಭಕ್ತ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ನಮ್ಮ ದೇಶ ಭಾರತದ ಮೊದಲ ಹೆಸರು ಏನಾಗಿತ್ತು?
2. ದೇಶ ವಿದೇಶಗಳಲ್ಲಿ ಬೌದ್ಧ ಮತ ಪ್ರಚಾರ ಮಾಡಿದ ನಮ್ಮ ಭಾರತದ ಪ್ರಮುಖ ಚಕ್ರವರ್ತಿ ಯಾರು?
3. ಬಿಹಾರ ರಾಜ್ಯದಲ್ಲಿದ್ದ ಪ್ರಾಚೀನ ವಿಶ್ವವಿದ್ಯಾಲಯ ಯಾವುದು?
4. ಆಂಗ್ಲರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರಿನ ರಾಣಿ ಯಾರು?
5. ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದ ಗೀತೆಯ ಹೆಸರೇನು?

## ಜ್ಞಾನ ವಿಜ್ಞಾನ

1. ದ್ವೈತ ಮತದ ಸ್ಥಾಪಕರು ಯಾರು?
2. ಪಂಜಾಬಿನ ಕೇಸರಿ ಎಂದು ಯಾರನ್ನು ಕರೆಯುವರು?
3. 'ಪೈ'ನ ಬೆಲೆಯನ್ನು ಮೊದಲು ಕಂಡುಹಿಡಿದವರ ಹೆಸರೇನು?
4. ವೈರ್‌ಲೆಸ್ ತಂತ್ರಜ್ಞಾನವನ್ನು ಕಂಡು ಹಿಡಿದ ವಿಜ್ಞಾನಿ ಯಾರು?
5. ಶಸ್ತ್ರ ಚಿಕಿತ್ಸೆಯ ಜನಕ ಎಂದು ಯಾರನ್ನು ಕರೆಯುತ್ತಾರೆ?

## ಸೆಪ್ಟೆಂಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಹಂಪೆ
2. ಬಸವನ ಬಾಗೇವಾಡಿ
3. ಡಾ॥ ಬಿ ಆರ್ ಅಂಬೇಡ್ಕರ್
4. ಸರ್.ಎಂ ವಿಶ್ವೇಶ್ವರಯ್ಯ
5. ಗೋಕರ್ಣ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಕಾವೇರಿ
2. ಬೆಂಗಳೂರು
3. ಚಿನ್ನ
4. ಆರ್ಯಭಟ
5. ಚರಕ

ಶುದ್ಧ ಮನಸ್ಸನ್ನು ಹೊಂದಿರುವವನು ಎಲ್ಲೆಲ್ಲೂ ಶುದ್ಧವಾದುದನ್ನೇ ಕಾಣುತ್ತಾನೆ – ಶಾರದಾದೇವಿ

# ಸದಸ್ಯತಾ ಅಭಿಯಾನ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರತಿ ವರ್ಷದಂತೆ ಸದಸ್ಯತಾ ಅಭಿಯಾನಕ್ಕೆ ಕರೆ ನೀಡಿದ್ದು, ದಿನಾಂಕ 01.10.21 ರಂದು ಸದಸ್ಯತ್ವ ಅಭಿಯಾನದ "ಸಂಪರ್ಕ ದಿನ"ವನ್ನು ನಡೆಸಿದ್ದು ಯಶಸ್ವಿಯಾಗಿ ನಡೆದಿದೆ.



## ರಾಜ್ಯ ಕಾರ್ಯಕಾರಿಣಿ ಸಭೆ





MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-10-2021 Date of Posting 20th or 21st of every month Posted at Periodical Rate

# ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ಗುಜರಾತ್– ಶಿಕ್ಷಕಿಯರ ಅಭ್ಯಾಸವರ್ಗದ ಒಂದು ವರದಿ

ಸಂಘಟನೆಯೂ ಕೂಡ ನಮ್ಮ ಮಗುವಿನಂತೆ ಎಂದು ಯೋಚಿಸಿ, ಹಗಲಿರುಳು ಅದರ ಬಗ್ಗೆಯೇ ಯೋಚಿಸಬೇಕೆಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘದ ಸಚಿವರಾದ ಶ್ರೀ ಮೋಹನ್ ಪುರೋಹಿತ್‌ರವರು ದಿನಾಂಕ 27/09/2021 ರಂದು ಗುಜರಾತ್ ಮಹಿಳಾ ಸಂವರ್ಗದಿಂದ ನಡೆದ ಆನ್‌ಲೈನ್ ಮಹಿಳಾ ಅಭ್ಯಾಸವರ್ಗದಲ್ಲಿ ಹೇಳಿದರು.

ಯಾವುದೇ ಒಂದು ಸಂಘಟನೆಯ ಶಕ್ತಿ ಸಂಘಟನೆಯ ಸದಸ್ಯರ ಸಂಖ್ಯೆಯ ಮೇಲೆ ನಿಂತಿದೆ. ಸದಸ್ಯತ್ವವೆಂಬುದು ಸಂಘಟನೆಯ ತಳಹದಿಯ ಇಟ್ಟಿಗೆಯಿದ್ದಂತೆ, ಹೇಗೆ ಒಂದು ಮನೆಗೆ ತಳಹದಿಯು ಗಟ್ಟಿಯಾಗಿರಬೇಕಾಗುತ್ತದೆಯೋ ಅದೇ ರೀತಿ ಸದಸ್ಯತ್ವವು ಹೆಚ್ಚಿರಬೇಕು. ಸದಸ್ಯತಾ ಅಭಿಯಾನದಲ್ಲಿ ನಿಮಗೆ ಮೂರು ರೀತಿಯ ಶಿಕ್ಷಕರು ಸಿಗುತ್ತಾರೆ–1. ಮೊದಲನೇಯವರು ಪೂರ್ಣ ಸಂಘಟನೆಗೆ ಸಮರ್ಪಿತರಾದವರು. ಸಂಘಟನೆಯ ಕಾರ್ಯವೈಖರಿಯಿಂದ ಸಂತುಷ್ಟರಾದವರು. ಅವರು ನಿಮಗೆ ಯಾವುದೇ ಪ್ರಶ್ನೆ ಮಾಡದೇ ಸದಸ್ಯರಾಗುತ್ತಾರಲ್ಲದೇ ತಮ್ಮ ವಿದ್ಯಾಲಯದ ಇನ್ನಿತರರು ಸದಸ್ಯರಾಗುವಂತೆ ಕೋರುವರು. 2. ಸಂಘಟನೆಯ ಕಾರ್ಯವೈಖರಿ ಬಗ್ಗೆ ಅಲ್ಪಸ್ವಲ್ಪ ಜ್ಞಾನ ಹೊಂದಿದವರು. ಇಂತಹವರಿಗೆ ನೀವು ಪ್ರೀತಿ ಮತ್ತು ಸ್ನೇಹದಿಂದ ಸಂಘಟನೆಯು ಶಿಕ್ಷಕರ ಹಿತದಲ್ಲಿ ಯಾವ ಕಾರ್ಯಗಳನ್ನು ಮಾಡಿದೆ, ಮಾಡುತ್ತಿದೆ ಎಂಬುದನ್ನು ಸವಿವರವಾಗಿ ಹೇಳಬೇಕು ಮತ್ತು ಸದಸ್ಯರನ್ನಾಗಿ ಮಾಡಬೇಕು. 3. ಮೂರನೇಯವರು ಸಂಘಟನೆಯ ಬಗ್ಗೆ ನಕಾರಾತ್ಮಕ ಭಾವನೆಗಳನ್ನು ಉಳ್ಳವರು. ಇವರಿಗೆ ಕೆರೆಯ ಹೊರಗಡೆ ನಿಂತು ನೋಡಿದರೆ ಹೇಗೆ ಆಳ ತಿಳಿಯುವುದಿಲ್ಲವೋ, ಅದೇ ರೀತಿ ನೀವು ಸಂಘಟನೆಯ ಹೊರಗಿನಿಂದ ನೋಡಿದರೆ ಸಂಘಟನೆಯ ಕಾರ್ಯವೈಖರಿ ಅರ್ಥವಾಗುವುದಿಲ್ಲ. ಆದ್ದರಿಂದ ನೀವು ಸದಸ್ಯರಾಗಿ ಸಂಘಟನೆಯ ಕಾರ್ಯವೈಖರಿಯನ್ನು ಅರ್ಥೈಸಿಕೊಳ್ಳಬೇಕು ಎಂದು ತಿಳಿಹೇಳಿ ಸದಸ್ಯರಾನ್ನಾಗಿ ಮಾಡಬೇಕು. ಹಗಲು–ರಾತ್ರಿಯೂ ಸಂಘಟನೆಯ ಬಗ್ಗೆಯೇ ಯೋಚಿಸುತ್ತಿರಬೇಕು ಹಾಗೂ ಸಂಘಟನೆಯ ವಿಸ್ತಾರ ಮಾಡಬೇಕು ಎಂದು ಹೇಳಿದರು.

ಸಂಘಟನೆಯನ್ನು ಗಟ್ಟಿಗೊಳಿಸಲು ನಿರಂತರವಾದ ಕಾರ್ಯ, ಅನುಶಾಸನ, ಸಂಘಟನೆಯ ವಿಚಾರಧಾರೆಗಳೊಂದಿಗೆ ನಡೆಯುವುದು ಅತ್ಯಂತ ಅವಶ್ಯಕವೆಂದು ಗುಜರಾತ್ ಶೈಕ್ಷಿಕ ಸಂಘದ ಸಂಘಟನಾ ಮಂತ್ರಿಗಳಾದ ಶ್ರೀ ಘನಶ್ಯಾಮ ಭಾಯಿ ಪಟೇಲ್‌ರವರು ಹೇಳಿದರು. ಈ ವರ್ಷವು ಗುಜರಾತ್ ರಾಷ್ಟ್ರೀಯ ಶೈಕ್ಷಿಕ ಸಂಘವು 4200 ಗ್ರೇಡ್ ಪೇ, ಸಿಸಿಸಿಯ ಪರೀಕ್ಷೆಗಳು, ಶಿಕ್ಷಕರಿಗಾಗಿ ನಡೆಸಬೇಕೆಂದಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆಯ ರದ್ದತಿ ಇಂತಹ ಅನೇಕ ವಿಚಾರಗಳಲ್ಲಿ ಸಫಲತೆಯನ್ನು ಪಡೆದಿದೆ. ಇದರ ಪರಿಣಾಮವೇ ಈ ವರ್ಷ 150000 ಸದಸ್ಯರನ್ನು ನಮ್ಮ ಸಂಘಟನೆಯಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಯಿತು. ಈ ವರ್ಷದ ಸದಸ್ಯತಾ ಅಭಿಯಾನವು ಸಂಪೂರ್ಣವಾಗಿ ಸಫಲತೆಯನ್ನು ಹೊಂದಿದೆ ಎಂದು ಹೇಳಿದರು. ಮೊದಲು ರಾಜ್ಯ ಸ್ತರದ ತಂಡವು ಜಿಲ್ಲಾ ಮಟ್ಟದಲ್ಲಿ ತಂಡವನ್ನು ಕಟ್ಟುವಲ್ಲಿ ಪ್ರಯತ್ನಿಸುವುದು. ನಂತರ ಜಿಲ್ಲಾ ತಂಡದ ಜೊತೆ ತಾಲ್ಲೂಕು ಹಂತದ ತಂಡದ ರಚನೆ ಮಾಡುವುದು, ಜಿಲ್ಲಾ ಮತ್ತು ತಾಲ್ಲೂಕು ತಂಡಗಳ ಸಹಾಯದಿಂದ ಪ್ರತಿ ಶಾಲೆಗೆ ತಲುಪುವ ಯೋಜನೆಯನ್ನು ಹಾಕಿಕೊಂಡಿದ್ದರಿಂದಲೇ ನಮಗೆ ಸಫಲತೆ ದೊರೆತಿದೆ ಎಂದು ಹೇಳಿದರು.

ಗುಜರಾತ್ ಸಂಘದ ಮಹಿಳಾ ಸಂವರ್ಗವೂ ಕೂಡ ನಿರಂತರವಾಗಿ ಸದಸ್ಯತಾ ಅಭಿಯಾನದಲ್ಲಿ ಕೈಜೋಡಿಸಿದ್ದರಿಂದಲೇ ಈ ಬಾರಿ ಒಂದೂವರೆ ಲಕ್ಷದವರೆಗೆ ಸದಸ್ಯತ್ವ ಮಾಡಲು ಸಾಧ್ಯವಾಯಿತು. ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ಪ್ರತಿ ವಿದ್ಯಾಲಯದವರೆಗೆ ನಮ್ಮ ಕಾರ್ಯ ವಿಸ್ತಾರವನ್ನು ಮಾಡಲು ಪ್ರಯತ್ನಿಸಬೇಕು ಎಂದು ಹೇಳಿದರು.





ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿ



## ಅಭಿನಂದನೆಗಳು

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಶ್ರೀ ಶಿವಾನಂದ ಸಿಂಧನಕೇರಾರವರು ಪ್ರಧಾನ ಕಾರ್ಯದರ್ಶಿಗಳಾಗಿ ಮತ್ತು ಶ್ರೀಮತಿ ಮಮತಾ ಡಿ.ಕೆರವರು ಮಹಿಳಾ ವಿಭಾಗದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com